# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper

70,000

HAMPI TIMES E-PAPER READERS

94486 33038 | NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201



ಸಂಪುಟ:01 Volume:01 • ಸಂಚಿಕೆ:339 Issue:339 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 13.06.2024 13.06.2024 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2



॥ ಶ್ರೀ ಸಿದ್ಧಿ ವಿನಾಯಕ ಪ್ರಸನ್ನ ॥

॥ ಓಂ ಏಕದಂತಾಯ ವಿದ್ಮಹೇ ವಕ್ರತುಂಡಾಯ ಧೀ ಮಹೀ ತನ್ನೋದಂತಿಃ ಪ್ರಚೋದಯಾತ್ ॥

# ರಜತ ಪ್ರಭಾವಳಿ ಸಮರ್ಪಣೆ



## ಶ್ರೀ ಸಿದ್ಧಿ ವಿನಾಯಕ ದೇವಸ್ಥಾನ ಹೊಸಪೇಟೆ, ವಿಜಯನಗರ ಜಿಲ್ಲೆ

# 25ನೇ ವರ್ಷದ ವಾರ್ಷಿಕೋತ್ಸವ

13 ಜೂನ್ 2024 ಗುರುವಾರ

ಹೊಸಪೇಟೆ ನಗರದ ಹೃದಯಭಾಗದಲ್ಲಿರುವ ಸರ್ವರ ಆರಾಧ್ಯ ದೈವ ಶ್ರೀ ಸಿದ್ಧಿ ವಿನಾಯಕ ಮೂರ್ತಿ ಪ್ರತಿಷ್ಠಾಪನೆಗೊಂಡು 13 ಜೂನ್ 2024ಕ್ಕೆ 25ನೇ ವಾರ್ಷಿಕೋತ್ಸವ ನಿಮಿತ್ತ ರಜತ ಪ್ರಭಾವಳಿ ಸಮರ್ಪಣೆ

ದಿನಾಂಕ 13-06-1999 ರಂದು ಶ್ರೀ ಸಿದ್ಧಿ ವಿನಾಯಕ ದೇವರ ಮೂರ್ತಿ ಶಾನಭಾಗ ಅವರು ಪ್ರತಿಷ್ಠಾಪನೆ ಮಾಡಿದರು.
ಅವರಿಗೆ ಆಗ 60 ವರ್ಷ, ಈಗ 85ನೇ ವರ್ಷದ ಸವಿನೆನಪಿಗಾಗಿ ಶ್ರೀ ಸಿದ್ಧಿ ವಿನಾಯಕ ದೇವರಿಗೆ ರಜತ ಪ್ರಭಾವಳಿ ಅರ್ಪಣೆ ಮಾಡಿರುತ್ತಾರೆ.

ಗುರುವಾರ ಬೆಳಿಗ್ಗೆ 6:30ಕ್ಕೆ ಗಣಪತಿಪೂಜನ, ಪುಣ್ಯಾಹವಾಚನ, ಧ್ವಜಾರೋಹಣ, ಶತಕುಂಭಾಭಿಷೇಕ, ಸಹಸ್ರ ಮೋದಕ ಹವನ, ಗರಿಕೆ ಪೂಜೆ, ಪೂರ್ಣಾಹುತಿ ಹಾಗೂ ಶ್ರೀ ಗಣೇಶನಿಗೆ ವಿಶೇಷ ಅಲಂಕಾರ ಮಹಾಪೂಜೆ ಜರುಗಲಿದೆ. ಮಧ್ಯಾಹ್ನ 12.30ಕ್ಕೆ ಮಹಾ ಮಂಗಳಾರತಿ.
ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿರುವ ಸರ್ವರಿಗೂ ಸ್ವಾಗತ

## ಸರ್ವರಿಗೂ ಹಾರ್ದಿಕ ಸ್ವಾಗತ ಕೋರುವವರು





ಬಿ. ಕೆ. ಪ್ರಕಾಶ ಶಾನಭಾಗ



ಬಿ. ಕೆ. ಮಹೇಂದ್ರ ಶಾನಭಾಗ

- ಹೋಟೆಲ್ ಶಾನಭಾಗ ಇಂಟರ್‌ನ್ಯಾಷನಲ್ ಪ್ರೈ.ಲಿ., ಹೊಸಪೇಟೆ
- ಶಾನಭಾಗ ಗ್ರಾನೈಟ್ಸ್ ಇಂಡಿಯಾ ಪ್ರೈ.ಲಿ., ಕುಮ್ಮಿನಘಟ್ಟ, ಚಿತ್ರದುರ್ಗ ಜಿಲ್ಲೆ
- ಶಾನಭಾಗ ಗ್ರಾನೈಟ್ಸ್ ಇಂಡಿಯಾ ಪ್ರೈ.ಲಿ., ಇಳಕಲ್, ಗದಗ ಜಿಲ್ಲೆ
- ಶಾನಭಾಗ ಮಿನರಲ್ಸ್ ಇಂಡಿಯಾ ಪ್ರೈ.ಲಿ., ಜೇವರ್ಗಿ, ಗುಲ್ಬರ್ಗ ಜಿಲ್ಲೆ
- ಶಾನಭಾಗ ಟಿಫಿನ್ ರೂಮ್, ಹೊಸಪೇಟೆ
- ಶಾನಭಾಗ ಹೋಟೆಲ್, ಹೊಸಪೇಟೆ
- ಶಾನಭಾಗ ಎಂಟರ್‌ಪ್ರೈಸಸ್, ಹೊಸಪೇಟೆ
- ಶಾನಭಾಗ ಟಿಫಿನ್ ರೂಮ್, ಕೆ.ಎಸ್.ಆರ್.ಟಿ.ಸಿ., ಹೊಸಪೇಟೆ.



ರಜತ ಪ್ರಭಾವಳಿ ದಾನಿಗಳು
**ಬೇಳೂರು ಕಮಲಾಕ್ಷ ಶಾನಭಾಗ**

## ನ್ಯಾನೋ ಕಥೆ

### ಅಪವಾದ

ಶ್ರೀಮಂತ ಮನೆತನದ ಮಗುವಿಗೆ ಮಾಲ್ ಗಳಲ್ಲಿ ಆಡುವುದಕ್ಕಿಂತ ಪಾರ್ಕ್ ನಲ್ಲಿ ಆಟವಾಡುವುದೆಂದರೆ ಬಲು ಇಷ್ಟ. ಅವಳಿಗೆ ಅಲ್ಲಿ ಕಡುಬಡತನದ ಹುಡುಗನ ಸ್ನೇಹವಾಗಿತ್ತು.ಮನೆಯವರಿಗೆ ಇಷ್ಟವಿಲ್ಲದಿದ್ದರೂ ತನ್ನ ಹುಟ್ಟಿದ ಹಬ್ಬಕ್ಕೆ ಅವನು ಬರಲೇಬೇಕೆಂದು ಹಠ ಮಾಡಿ ಕರೆಸಿಕೊಂಡಿದ್ದಳು.ಸಂತೋಷದಿಂದ ಅವನು ಇವಳ ಸಂಭ್ರಮದಲ್ಲಿ ಪಾಲ್ಗೊಂಡನು.ಅಲ್ಲಿ ಇವಳ ತಾಯಿಯ ಚಿನ್ನದ ಹಾರ ಕಾಣೆಯಾಗಿದೆ ಎಂಬ ಗೊಂದಲ ಶುರುವಾಯಿತು.ಎಲ್ಲರ ವಕ್ರದೃಷ್ಟಿ ಈ ಬಡ ಹುಡುಗನ ಕಡೆ ಸಂಚಲನವಾಯಿತು.ಅವನು ನಾನು ತೆಗೆದುಕೊಂಡಿಲ್ಲ ಎಂದು ಎಷ್ಟು ಹೇಳಿದರು ಯಾರು ನಂಬಲಿಲ್ಲ.ಎಲ್ಲರೂ ಅವನ ಮೇಲೆಯೇ ಅಪವಾದವನ್ನು ಹೊರಸಿದರು.ಸರಿಯಾಗಿ ಮನೆಯಲ್ಲಾ ಹುಡುಕಿದಾಗ ಆ ಹಾರವು ಅವಳ ಅಮ್ಮನ ಕಪಾಟಿನಲ್ಲಿಯೇ ಇತ್ತು.ನಾವು ಬಡವರೆಂದು,ನಮ್ಮ ಅಸಹಾಯಕತೆಯನ್ನು ಮನಗಂಡು ಸುಖಾ ಸುಮ್ಮನೆ ಅಪವಾದ ಮಾಡಿದರಲ್ಲ ಎಂದು ಬಹಳ ನೊಂದುಕೊಂಡು ಅಲ್ಲಿಂದ ಹೊರ ನಡೆದನು.

**– ಚೇತನ ಭಾರ್ಗವ, ಬೆಂಗಳೂರು**

## ಬೆಳೆ ವಿಮೆ ನೋಂದಾಯಿಸಿಕೊಳ್ಳಿ

■ **ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸ್ತಕ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯ ಮುಂಗಾರು ಹಂಗಾಮಿನ ಬೆಳೆ ವಿಮೆಗೆ ನೋಂದಾಯಿಸಲು ಬೆಳೆ ಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರು ಬ್ಯಾಂಕುಗಳಲ್ಲಿ ವಿಮೆ ಮಾಡಿಸಿಕೊಳ್ಳಬೇಕು ಎಂದು ಜಂಟಿ ಕೃಷಿ ನಿರ್ದೇಶಕ ತಿರುಮಲೇಶ್ ಅವರು ತಿಳಿಸಿದ್ದಾರೆ.

ಈ ಯೋಜನೆಯಡಿ ಗ್ರಾಮ ಪಂಚಾಯಿತಿ ಮಟ್ಟದ ಬೆಳೆಗಳಾದ ಭತ್ತ, ಮುಸುಕಿನ ಜೋಳ ಹಾಗೂ ಹೋಬಳಿ ಮಟ್ಟದ ಬೆಳೆಗಳಾದ ಜೋಳ, ರಾಗಿ, ಸಜ್ಜೆ, ನವಣೆ, ತೊಗರಿ, ಹುರುಳಿ, ಸೂರ್ಯಕಾಂತಿ, ಎಳ್ಳು, ಹತ್ತಿ, ನೆಲಗಡಲೆ, ಈರುಳ್ಳಿ, ಭತ್ತ, ಕೆಂಪು ಮೆಣಸಿನಕಾಯಿ ಬೆಳೆಗಳಿಗೆ ವಿಮೆಯನ್ನು ಮಾಡಿಸಿಕೊಳ್ಳಬೇಕು.

**ಬೆಳೆ ವಿಮೆಗೆ ಕೊನೆಯ ದಿನಾಂಕ ಇಂತಿವೆ:**

ಮುಸುಕಿನ ಜೋಳ, ಜೋಳ, ಸೂರ್ಯಕಾಂತಿ, ತೊಗರಿ, ಹತ್ತಿ, ಕೆಂಪು ಮೆಣಸಿನಕಾಯಿ, ಈರುಳ್ಳಿ ಮತ್ತು ಎಳ್ಳು ಬೆಳೆಗಳಿಗೆ ವಿಮೆ ಮಾಡಿಸಿಕೊಳ್ಳಲು ಜುಲೈ 31 ಕೊನೆಯ ದಿನವಾಗಿದೆ. ಭತ್ತ, ತೊಗರಿ, ರಾಗಿ, ನವಣೆ, ಹುರುಳಿ, ನೆಲಗಡಲೆ ಮತ್ತು ಸಜ್ಜೆ ಬೆಳೆಗಳಿಗೆ ವಿಮೆ ಮಾಡಿಸಲು ಆಗಸ್ಟ್ 16 ಕೊನೆಯ ದಿನ ಮತ್ತು ಎಳ್ಳು ಬೆಳೆಗೆ ವಿಮೆ ಮಾಡಲು ಜುಲೈ 15 ಕೊನೆಯ ದಿನವಾಗಿದೆ. ಈ ಯೋಜನೆಯ ಲಾಭ ಪಡೆಯಲು ಯಾವುದೇ ಸ್ಥಳೀಯ ಬ್ಯಾಂಕ್, ಸಾರ್ವಜನಿಕ ಸೇವಾ ಕೇಂದ್ರ ಮತ್ತು ಗ್ರಾಮಪಂಚಾಯತ್‌ಗಳಲ್ಲಿ ಹೊಸದಾಗಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಒನ್ ಸೇವಾ ಕೇಂದ್ರಗಳನ್ನು ಸಂಪರ್ಕಿಸಬಹುದು. ಬೆಳೆ ಸಾಲ ಪಡೆದ ರೈತರು ಇಚ್ಛೆ ಪಡದೇ ಇದ್ದಲ್ಲಿ ತಮ್ಮ ವ್ಯಾಪ್ತಿಯ ಬ್ಯಾಂಕಿನ ವ್ಯವಸ್ಥಾಪಕರಿಗೆ ಬೆಳೆ ನೋಂದಣಿ ಅಂತಿಮ ದಿನಾಂಕಕ್ಕಿಂತ 7 ದಿನಗಳ ಮುಂಚಿತವಾಗಿ ಲಿಖಿತವಾಗಿ ಮುಚ್ಚಳಿಕೆ ಪತ್ರವನ್ನು ನೀಡಿದಲ್ಲಿ ಅಂತಹ ರೈತರನ್ನು ಬೆಳೆ ವಿಮೆ ಯೋಜನೆಯಿಂದ ಕೈಬಿಡಲಾಗುತ್ತದೆ.ಹೆಚ್ಚಿನ ಮಾಹಿತಿಗಾಗಿ ನಿಮ್ಮ ಸಮೀಪದ ರೈತ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಹಾಗೂ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

## ನೀವೂ ಬರೆಯಬಹುದು

ಹಂಪಿ **ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಕಾವೇರಿಯಿಂದ ಗೋದಾವರಿ

## (ನದಿ – ಸಂಸ್ಕೃತಿ ಮತ್ತು ಬಹುತ್ವ)



ಕವಿರಾಜಮಾರ್ಗ'ವು ಕರ್ನಾಟಕದ ಭೌಗೋಳಿಕ ಹರಹನ್ನು ಎರಡು ಹೊಳೆಗಡಿಗಳ ಮೂಲಕ ಸೂಚಿಸುತ್ತದೆ: "ಕಾವೇರಿಯಿಂದ ಮಾ ಗೋದಾವರಿವರಮಿರ್ಪ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ ವಸುಧಾವಳಯ ವಿಲೀನ ವಿಶದ ವಿಷಯ ವಿಶೇಷಂ". ಈಗಲೂ ರಾಜ್ಯ ರಾಷ್ಟ್ರಗಳ ಹೊಳೆಗಳು ಗಡಿಗಳಾಗಿ ಕೆಲಸ ಮಾಡುತ್ತಿವೆ. ಆದರೆ ಈ ಭೌಗೋಳಿಕ ಗಡಿಯೊಳಗಿನ ನಾಡು (ಜನಪದ) ಏಕಾಂಗಿಯಲ್ಲ. ಅದು ವಸುಧಾ ವಲಯದಲ್ಲಿ ವಿಲೀನವಾಗಿದೆ. ಹೀಗೆ ವಿಲೀನಗೊಂಡಿದ್ದರೂ ತನ್ನ ವಿಶೇಷತೆಯಿಂದ ಪ್ರತ್ಯೇಕವಾಗಿ ಸ್ವತಂತ್ರವಾಗಿ ಉಳಿದಿದೆ. ಒಂದು ದೊಡ್ಡ ಘಟಕದ ಭಾಗವಾಗಿರುತ್ತಲೇ ಸ್ವತಂತ್ರವಾಗಿರುವ ಈ ಗುಣ, ಫೆಡರಲ್ ತತ್ವದ ಸಂಗತಿಯಾಗಿದೆ. ನಾಡಗೀತೆಯಲ್ಲಿ 'ಭಾರತಮಾತೆಯ ಮಗಳಾಗಿ ಕರ್ನಾಟಕ ಮಾತೆಯನ್ನಾಗಿ ಕಲ್ಪಿಸಿಕೊಂಡಿದ್ದರಲ್ಲೂ ಇದೇ ತತ್ವವಿದೆ.

ಮುಂದೆ ಮಾರ್ಗಕಾರನು ಈ ನಾಡೊಳಗೆ ಪಟ್ಟದಕಲ್ಲು ಕೊಪ್ಪಳ ಲಕ್ಷ್ಮೇಶ್ವರ ಒಕ್ಕುಂದ ಪಟ್ಟಣಗಳ ನಡುವಣ ಒಳತಿರುಳಿನ ಇನ್ನೊಂದು ನಕ್ಷೆ ರಚಿಸುತ್ತಾನೆ. ಇದು ತಿರುಳುಗನ್ನಡದ ಕೋರ್ ಏರಿಯಾ. ಭುವನವಲಯ, ಕನ್ನಡ ನಾಡು, ತಿರುಳ್ಗನ್ನಡದ ಸೀಮೆ– ಈ ಮೂರೂ ಸ್ತರಗಳು, ಒಂದೇ ವೃತ್ತದೊಳಗಿನ ಹಲವು ವೃತ್ತಗಳು. ಒಂದೇ ಕ್ಯಾನವಾಸಿನೊಳಗಣ ಹಲವು ಚಿತ್ರಗಳು. ಟಾಗೂರರ 'ಜನಗಣಮನ'ವು ಭಾರತವನ್ನು ಪ್ರಾಂತ್ಯಗಳ ಒಕ್ಕೂಟವೆಂದು ( ಪಂಜಾಬ ಸಿಂಧು ಗುಜರಾತ ಮರಾಠ ದ್ರಾವಿಡ ಉತ್ಕಲ ) ಗ್ರಹಿಸಿತ್ತು. ಆಳಿದ ರಾಜಪ್ರಭುತ್ವಗಳ ಮೂಲಕ ಭಾರತವನ್ನು ಗ್ರಹಿಸುವುದಕ್ಕಿಂತ ವಿಭಿನ್ನವಾದ ಗ್ರಹಿಕೆಯಿದು.ಇದರಂತೆ ಭಾರತವು ಸ್ವಾಂತಂತ್ರ್ಯ ನಂತರ ಪ್ರಾಂತ್ಯಗಳ ಒಕ್ಕೂಟವಾಯಿತು.

ರಾಷ್ಟ್ರಗೀತೆಯಲ್ಲಿ ವಿಂಧ್ಯ ಹಿಮಾಚಲದ ಪರ್ವತಗಳೂ ಯುಮುನಾ ಗಂಗಾ ಹೊಳೆಗಳೂ ಬರುತ್ತವೆ. ಕವಿರಾಜಮಾರ್ಗವು ಕಾವೇರಿ–ಗೋದಾವರಿಗಳನ್ನು ಉಲ್ಲೇಖಿಸಿದರೆ, ಕುವೆಂಪು ನಾಡಗೀತೆಯು, ಕೃಷ್ಣಾ ಶರಾವತಿ ತುಂಗಾ ಕಾವೇರಿಗಳನ್ನು ಉಲ್ಲೇಖಿಸುತ್ತದೆ. ನಿಸಾರರ 'ನಿತ್ಯೋತ್ಸವ'ವು ತುಂಗೆಯ ತೆನೆಬಳುಕನ್ನೂ ಸಹ್ಯಾದ್ರಿಯ ಲೋಹದದಿರ ಉತ್ತುಂಗದ ಶಿಖರವನ್ನು ನೆನೆಯುತ್ತದೆ. ಇವಕ್ಕೆಲ್ಲ ಹೋಲಿಸಿದರೆ, ಇಕ್ಬಾಲರ 'ಸಾರೆ ಜಹಾಂಸೆ ಅಚ್ಛಾ' ಯಾವ ನದಿಯನ್ನೂ ಹೆಸರಿಸುವುದಿಲ್ಲ; ಹಿಂದೂಸ್ತಾನವೆಂಬ ತಾಯ ಮಡಿಲಲ್ಲಿ ಮಕ್ಕಳಂತೆ ಸಾವಿರಾರು ನದಿಗಳು ಆಡುತ್ತಿವೆ ಎನ್ನುತ್ತದೆ. ಆಯ್ದ ನದಿಗಳನ್ನು ಪ್ರಾತಿನಿಧಿಕವಾಗಿ ಹೆಸರಿಸುವಾಗ ಉಳಿದ ನದಿಗಳು ಕೈಬಿಟ್ಟು ಹೋಗುತ್ತವೆ. ಈ ಪ್ರಾತಿನಿಧಿಕ ರಾಜಕಾರಣದಿಂದ ಇಕ್ಬಾಲರ ಗೀತೆ ಪಾರಾಗಿದೆ. ಭಾರತವನ್ನು ಉದ್ಯಾನವಾಗಿ ಪರಿಕಲ್ಪಿಸುವ ಇಕ್ಬಾಲ್, ವಿವಿಧ ಇಂಚರದ ಹಕ್ಕಿಗಳು ಇದರೊಳಗೆ ಆಡುತ್ತಿವೆ ಎನ್ನುವರು. ನದಿಗಳು, ಹಕ್ಕಿಗಳು ಎಲ್ಲವೂ ಬಹುವಚನದಲ್ಲಿವೆ. ಬೇಂದ್ರೆ ಕೂಡ ನೂರುಸ್ವರ ನೂರುಮರಗಳ ರೂಪಕವನ್ನು ಬಹುವಚನದಲ್ಲೇ ಹೇಳುವರು. ಬಹುವಚನವು ಬಹುತ್ವದ ಬುನಾದಿ. ನಮ್ಮ ಸಂವಿಧಾನವು 'ನಾವು' ಎಂದು ಶುರುವಾಗುತ್ತದೆ.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Hampi Times E-paper
SCAN AND READ

ನಾಡಿನಲ್ಲಿ ಹಲವು ನದಿಗಳಿರುವುದು ಅವು ಸಮುದ್ರವನ್ನು ಕೂಡುವುದು ಭೌಗೋಳಿಕ ಸತ್ಯ. ಭಾರತಾಂಬೆಯ ಮಡಿಲಲ್ಲಿ ಮಕ್ಕಳಂತೆ ಆಡುವುದು ಬಹುತ್ವತತ್ವ. ಗಡಿಗೆರೆಗಳಾಗುವ ಹೊಳೆಗಳು, ಚದುರಿಹೋದ ಪ್ರಾಂತ್ಯಗಳನ್ನು ನಾಡನ್ನಾಗಿ ರೂಪಿಸುತ್ತವೆ. ನಾಡವರನ್ನು ಭಾವನಾತ್ಮಕವಾಗಿ ಕೂಡಿಸುತ್ತವೆ. ಚೀನಾದಲ್ಲಿ ಹುಟ್ಟುವ ಸಿಂಧೂ ನದಿ, ಭಾರತದ ಮೂಲಕ ಹಾದು ಪಾಕಿಸ್ತಾನಕ್ಕೆ ಹೋಗುವುದು. ಕೋಶಿಯು ನೇಪಾಳದಲ್ಲಿ ಹುಟ್ಟಿ ಭಾರತವನ್ನು ಹೊಕ್ಕು ಬಾಂಗ್ಲಾದೇಶದೊಳಗೆ ಪ್ರವೇಶಿಸುವುದು. ಗಂಗೆಗೆ ಬಾಂಗ್ಲಾದಲ್ಲಿ ಪದ್ಮಾ ಎನ್ನುವರು. ಮಹಾರಾಷ್ಟ್ರದಲ್ಲಿ ಜನಿಸುವ ಕೃಷ್ಣಾ–ಭೀಮಾ ಕರ್ನಾಟಕವನ್ನು ಹಾದು ತೆಲಂಗಾಣ–

ಆಂಧ್ರಗಳ ಮೂಲಕ ಬಂಗಾಳ ಕೊಲ್ಲಿಗೆ ಸೇರುತ್ತವೆ. ಪರ್ವತಗಳಲ್ಲಿ ಹುಟ್ಟುವ ನದಿಗಳು ಬಯಲು ಪ್ರದೇಶದಲ್ಲಿ ಹರಿಯುತ್ತವೆ. ಬಯಲಲ್ಲಿ ಬೆಳೆವ ಧಾನ್ಯಗಳು ಪರ್ವತ ಪ್ರದೇಶಗಳಿಗೆ ಮರಳಿ ಸರಬರಾಜು ಆಗುತ್ತವೆ. ಒಂದು ರಾಜ್ಯಕ್ಕೆ ನೀರುಕೊಡುವ ನದಿ ಇನ್ನೊಂದು ರಾಜ್ಯದಲ್ಲಿ ಹುಟ್ಟುತ್ತದೆ. ಇದೊಂದು ಆರ್ಥಿಕ ಸಂಬಂಧ ಕೂಡ.

ಮರುಭೂಮಿ ಘಟ್ಟಪ್ರದೇಶ ಕರಾವಳಿ ಹಿಮಾಲಯ ಬಯಲುಸೀಮೆ ಜೌಗು ಪ್ರದೇಶಗಳಿಂದ ಕೂಡಿರುವ ಭಾರತವು ಬಹುರೂಪೀ ಭೌಗೋಳಿಕತೆಯ ದೇಶ. ಇದರಂತೆ ಕರ್ನಾಟಕವೂ ಮಲೆನಾಡು ಕರಾವಳಿ ಬಯಲು ಸೀಮೆಯ ವೈವಿಧ್ಯ ಪಡೆದುಕೊಂಡಿದೆ. ಈ ವೈವಿಧ್ಯದ ಒಳಗೇ ಹಲವು ಒಳವೈವಿಧ್ಯಗಳಿವೆ. ತುಮಕೂರಿನ ಬಯಲುಸೀಮೆ ರಾಯಚೂರಿನ ಬಯಲು ಸೀಮೆಗಿಂತ ವಿಭಿನ್ನ. ತೀರ್ಥಹಳ್ಳಿಯ ಮಲೆನಾಡು ಕೊಡಗಿಗಿಂತ ಬೇರೆ. ಭೌಗೋಳಿಕತೆಯ ನೆಲೆಯಲ್ಲಿ ರೂಪುಗೊಂಡ ಪ್ರಾಂತೀಯತೆಯು ಭಾರತದ ವಿಶಿಷ್ಟತೆ. ಭೌಗೋಳಿಕತೆಯು ಆಹಾರ ಉಡುಪು ನುಡಿ ರೀತಿ ರಿವಾಜುಗಳನ್ನು ಒಳಗೊಂಡಂತೆ ಜನರ ಬದುಕಿನ ವಿನ್ಯಾಸವನ್ನು ರೂಪಿಸುತ್ತದೆ. ನಿಯಂತ್ರಿಸುತ್ತದೆ. ಈಶಾನ್ಯ ಭಾರತದ ಗುಡ್ಡಗಾಡು ಪ್ರದೇಶವು ಚಿಕ್ಕಚಿಕ್ಕ ಪ್ರಾಂತ್ಯಗಳನ್ನು ರೂಪಿಸಿದೆ. ಈ ಪ್ರಾಂತ್ಯಗಳಲ್ಲಿರುವ ಆದಿವಾಸಿಗಳ ಭಾಷೆ ಸಂಸ್ಕೃತಿ ವಿಭಿನ್ನವಾಗಿವೆ. ಭೌಗೋಳಿಕ, ಪ್ರಾಂತೀಯ, ಭಾಷಿಕ, ಸಾಂಸ್ಕೃತಿಕ ವೈವಿಧ್ಯಗಳು ತಮ್ಮ ಅನನ್ಯತೆಯ ಜತೆಗೆ ನೆಲೆಸಿವೆ.



ವಿಶೇಷವೆಂದರೆ, ಕನ್ನಡ ಕಾವ್ಯಗಳಲ್ಲಿ ನಾಡಿನ ಪ್ರಾಕೃತಿಕ ವರ್ಣನೆಯ ಬೆನ್ನಲ್ಲೇ, ಜನರ ಗುಣಸ್ವಭಾವಗಳ ಪ್ರಸ್ತಾಪ ಬರುವುದು. ಇದು ಪ್ರಕೃತಿಗೂ ಜನರ ಸ್ವಭಾವಕ್ಕೂ ಇರುವ ಸಂಬಂಧ ಸೂಚಿಸುತ್ತದೆ. ಪ್ರಕೃತಿಯಂತೆ ಮುಕ್ತವಾಗಿ ಬದುಕಬೇಕು ಎಂಬ ಸಂದೇಶವನ್ನೂ ಅರಹುತ್ತದೆ. ಕವಿರಾಜಮಾರ್ಗವು ಎರಡು ಹೊಳೆಗಳ ನಡುವಣ ನಾಡಿನ ವರ್ಣನೆ ಬಳಿಕ, ನಾಡವರ ವರ್ಣನೆ ಮಾಡುತ್ತದೆ. ಅವರು ಕುರಿತೋದದೆಯೂ ಕಾವ್ಯಪ್ರಯೋಗ ಪರಿಣತಮತಿಗಳು ಎನ್ನುತ್ತದೆ. ಪಂಪನಲ್ಲೂ ಬನವಾಸಿ ವರ್ಣನೆಯ ಬಳಿಕ ಕನ್ನಡಿಗರು ಚಾಗದ ಭೋಗದ ಅಕ್ಕರದ ಗೇಯದ ಗೊಟ್ಟಿಯ ಅಲಂಪಿನ ಮಾನಿಸರ್ ಆಗಿರುವ ಚಿತ್ರ ಬರುತ್ತದೆ. ಧಾರವಾಡದ ನಿಸರ್ಗದ ಭಾಗವಾಗಿ ಮಳೆ ಬೆಟ್ಟ ಕಾಡುಗಳನ್ನು ಕಾಣಿಸುವ ಬೇಂದ್ರೆಕಾವ್ಯ, ಅದು ಧಾರವಾಡಿಗರ ಸಾಂಸ್ಕೃತಿಕ ವೈವಿಧ್ಯಕ್ಕೂ ಬುನಾದಿಯಾಗಿದೆ ಎಂದು ಧ್ವನಿಸುತ್ತದೆ. ನಿಸಾರರ 'ನಿತ್ಯೋತ್ಸವ'ದಲ್ಲೂ ತುಂಗೆಯ ತೆನೆಬಳಿಕಿದೆ. ಸಹ್ಯಾದ್ರಿಯ ಲೋಹದದಿರ ಉತ್ತುಂಗದ ಶಿಖರವಿದೆ. ಆದರೆ ನಾಡವರ ಗುಣಸ್ವಭಾವಗಳ ('ನಿರ್ಮತ್ಸರ ಮನದುದಾರ ಮಹಿಮೆ') ಕಿಂಚಿತ್ ಉಲ್ಲೇಖ ಮಾತ್ರವಿದೆ.

ನಾಡನ್ನು ಕುರಿತು ಕವಿವರ್ಣನೆಗಳು ರಮ್ಯಭಾವದಲ್ಲಿ ದೇಶದ ಭೌಗೋಳಿಕ ವೈವಿಧ್ಯದ ಜತೆಗೆ, ಅಲ್ಲಿ ನೆಲೆಸಿದವರ ಗುಣಧರ್ಮವನ್ನೇನೊ ಬಣ್ಣಿಸುತ್ತವೆ. ಆದರೆ ನಾಡನ್ನು ಜನರ ದುಡಿಮೆ ಕಸುಬು ಬೆಳೆ ಆಹಾರಗಳ ಮೂಲಕ ನೋಡುವುದು ಕಡಿಮೆ. ಇವಕ್ಕೆ ಹೋಲಿಸಿದರೆ, ಕರ್ನಾಟಕದ ಭೌಗೋಳಿಕ ವೈವಿಧ್ಯಕ್ಕೂ ಮತ್ತು ಸಾಂಸ್ಕೃತಿಕ ಬಹುತ್ವಕ್ಕೂ ಇರುವ ಅಂತರ್ ಸಂಬಂಧವನ್ನು ಕಾದಂಬರಿಗಳು ಕತೆಗಳು ಚೆನ್ನಾಗಿ ಒಳಗೊಳ್ಳುತ್ತವೆ. 'ಮಲೆಗಳಲ್ಲಿ ಮದುಮಗಳು'ವಿನಲ್ಲಿ ಕಾಡು ನದಿ ಬೆಟ್ಟ ಮಳೆಗಳಿಗೂ ಅಲ್ಲಿನ ಜನರ ಬದುಕಿಗೂ ಆಪ್ತವಾದ ನಂಟಿದೆ. ರಾವಬಹಾದ್ದೂರರ 'ಗ್ರಾಮಾಯಣ'ವು ಹೆಸರೇ ಹೇಳುವಂತೆ ಒಂದು ಗ್ರಾಮದ ಭೂತ ವರ್ತಮಾನಗಳ ಚರಿತ್ರೆ. ಈ ಚರಿತ್ರೆಯು ಅಲ್ಲಿನ ಕಪ್ಪುಭೂಮಿ, ಜೋಳದ ಬೆಳೆ, ಕೃಷ್ಣಾ ಹೊಳೆಯ ಜತೆಗೆ ಅವಿನಾ ಸಂಬಂಧ ಹೊಂದಿದೆ. ಅಲ್ಲಿನ ಹಿರಿಹೊಳೆ ಮಾನವ ಸಾಹಸ ಸಂಭ್ರಮ ಕ್ರೌರ್ಯ ದುರಂತಗಳಿಗೆ ಕಾರಣವೂ ಸಾಕ್ಷಿಯೂ ಆಗುತ್ತದೆ.

ಕರಾವಳಿಯ ಊರಿನ ಕತೆ 'ಇಂದಿರಾಬಾಯಿ' ಕಾದಂಬರಿ. ಎಂತಲೇ ಭಾಸ್ಕರನು ಓದಲು ಇಂಗ್ಲೆಂಡಿಗೆ ಹೋಗುವನು. ಸಮುದ್ರಲಂಘನದ 'ದೋಷ'ದಿಂದ ಬಹಿಷ್ಕೃತನಾದರೂ ಕಲೆಕ್ಟರ್ ಹುದ್ದೆಯಲ್ಲಿ ಹೊಸದೊರೆಯಾಗಿ ಬರುವನು. ಪುಟ್ಟವಿಧವೆ ಇಂದಿರೆಯನ್ನು ಮದುವೆಯಾಗಿ ಹೊಸ ಬಾಳನ್ನು ಆರಂಭಿಸುವನು. ಅದು ಕರಾವಳಿಗೂ ಹೊಸಬಾಳಿನ ಆರಂಭ. ಮಲೆನಾಡಿನಲ್ಲಿ ತುಂಗೆಯ ಪ್ರವಾಹವು ಜೀತದಾಳು ನಿಂಗನಂತಹ, ಯಾರೂ ಅರಿಯದ ವೀರನನ್ನು ಲೋಕಕ್ಕೆ ಎತ್ತಿಕಾಣಿಸುತ್ತದೆ. ಹಲಸಂಗಿಯ ತ್ರಿಪದಿಗಳಲ್ಲಿ ಬಯಲುಸೀಮೆಯ ಹೆಣ್ಣುಮಗಳು ಬೇಸಗೆಯಲ್ಲಿ ಬೇವಿನ ಮರದ ಹಾಗೂ ಭೀಮಾ ಹೊಳೆಯ ತಂಪನ್ನೂ ಸ್ಮರಿಸುತ್ತಾಳೆ. ಜಲ ಮತ್ತು ಸಸ್ಯವಾಚಕಗಳೂ ಮುಗಿದ ಕೂಡಲೇ ತಾಯ ನೆನಪಿಗೆ ತ್ರಿಪದಿ ನೆಗೆಯುತ್ತದೆ. ಮರ ಮತ್ತು ಹೊಳೆಗಳಷ್ಟೇ ತಂಪು ಕೊಡುವ ಹೆಣ್ಣುಜೀವವೂ ಅಲ್ಲಿದೆ. ನೀರು ಬೇವು ತಾಯಿ– ಮೂರೂ ಶಾಕ್ತ ಮಾತೃಸಂಸ್ಕೃತಿಯಲ್ಲಿ ಒಂದೇ ನೆಲೆಯವು. ಸಾಹಿತ್ಯದಲ್ಲಿ ನಿಸರ್ಗವು ಮನುಷ್ಯರ ಗುಣಸ್ವಭಾವದ, ನಾಡಿನ ಸಂಸ್ಕೃತಿಯ ನಿಯಂತ್ರಕನಾಗಿ ವಿಸ್ತರಣೆಯಾಗಿ ಸಂಗಾತಿಯಾಗಿ ಬರುವುದನ್ನು ಸಾಹಿತ್ಯವು ಸೂಕ್ಷ್ಮವಾಗಿ ಚಿತ್ರಿಸುತ್ತಲೇ ಬಂದಿದೆ.

ಕರಾವಳಿಯ ಭೂತಾರಾಧನೆ, ಯಕ್ಷಗಾನ ಮೀನುಗಾರಿಕೆಗಳಿಗೂ ಕಡಲು ಪಶ್ಚಿಮಘಟ್ಟಗಳ ನಡುವಣ ಅದರ ಭೌಗೋಳಿಕತೆಗೂ, ಘಟ್ಟದಲ್ಲಿ ಹುಟ್ಟಿ ಕಡಲಿಗೆ ಸೇರುವ ಹೊಳೆಗಳಿಗೂ ಸಂಬಂಧವಿದೆ. ಈಗಲೂ ಮೊಗವೀರರು ಮೀನು ಹಿಡಿಯಲು ದೋಣಿಯನ್ನು ಕಡಲಿಗೆ ಇಳಿಸುವಾಗ, ಕದ್ರಿಬೆಟ್ಟದಿಂದ ನಾಥಯೋಗಿಯನ್ನು ಕರೆದು, ಮಚ್ಚೇಂದ್ರನ ಪೂಜೆ ಮಾಡಿಸುವರು. ಕಡಲು ನಿಸರ್ಗ– ಮೀನುಗಾರಿಕೆ ಆರ್ಥಿಕತೆ. ಇವೆರಡನ್ನೂ ಮಚೇಂದ್ರನ ಆರಾಧನೆ ಸಾಂಸ್ಕೃತಿಕ ಕೊಂಡಿಯಾಗಿ ಬೆಸೆಯುತ್ತಿದೆ. ಉತ್ತರ ಕರ್ನಾಟಕದ ಬಿಸಿಲು ಹೊಳೆ ಕಪ್ಪು ಎರೆನೆಲೆಗಳಿಗೂ ಅಲ್ಲಿನ ಜೋಳ ಕಸುಬಿ ಕಡಲೆ ಸುರೇಪಾನದ ಬೆಳೆಗೂ, ಅಲ್ಲಿನ ಊಟ ಹಾಡು ಕುಣಿತ ಜಾತ್ರೆಗಳಿಗೂ ನೇರ ನಂಟಿದೆ.

ಒಂದು ನಾಡಿನ ಭೌಗೋಳಿಕ ವೈವಿಧ್ಯವು ಸಾಂಸ್ಕೃತಿಕ ಬಹುತ್ವವಾಗದೆ ಹೋಗಬಹುದೇ? ಅದು ಕೇವಲ ರಮ್ಯಚಿತ್ರಗಳಲ್ಲಿ ಉಳಿದುಬಿಡಬಹುದೇ? ನಿಸರ್ಗದ ಸಮೃದ್ಧಿಯನ್ನು ಹಾಡುವ ಕೆಲವು ಹಾಡುಗಳು, ಮನುಷ್ಯರು ಕೂಡಿಬಾಳುವ ತತ್ವಕ್ಕೆ ಬದಲಾಗಿ, ವಿದ್ವೇಷದ ಚಿಂತನೆಯನ್ನೂ ಒಳಗೊಂಡಿರಬಹುದೇ? ಹೌದು, ಇದಕ್ಕೂ ಪುರಾವೆಗಳಿವೆ. ಹೀಗಾಗಿಯೇ ಬಹುತ್ವವೆಂದರೆ, ಹಂಚಿಕೊಂಡು ಬದುಕುವ ಸಮಾಜವಾದ. ಆದರೆ ಭಾರತದಲ್ಲಿ ಪ್ರಾಂತ್ಯಗಳು ನೈಸರ್ಗಿಕ ಸಂಪನ್ಮೂಲಗಳನ್ನು ಹಂಚಿಕೊಂಡು ಬದುಕುವ ವಿಷಯದಲ್ಲಿ ವಿವೇಕದಿಂದ ತಕ್ಕ ಮಾತುಕತೆ ಮತ್ತು ಒಪ್ಪಂದ ಮಾಡಿಕೊಳ್ಳದೆ ತಗಾದೆಗಳನ್ನು ಸೃಷ್ಟಿಸಿಕೊಂಡಿವೆ. ನೀರಿನ ಮೂಲಕ ಕೂಡಿಸುವ ಹೊಳೆಗಳೂ ಪ್ರಾಂತ್ಯಗಳ ವೈಮನಸ್ಸಿಗೆ ಕಾರಣವಾಗಿವೆ. ಇದರ ದೋಷ ಗಡಿಸೀಮೆಯಾಗಿದ್ದೂ ಸೀಮೋಲ್ಲಂಘನ ಮಾಡುವ ಹೊಳೆಗಳದ್ದಲ್ಲ. ಅದರ ನೀರನ್ನು ಹಂಚಿಕೊಂಡು ಬದುಕಲಾರದ ಜನರದ್ದು. ಎಂತಲೆ ನಿಸರ್ಗದ ವರ್ಣನೆ ಬಳಿಕ ಜನರ ಉದಾರಗುಣಗಳನ್ನು ನಮ್ಮ ಕವಿಗಳು ಕಾಣಿಸುವುದು, ವಾಸ್ತವ ಹೀಗಿದೆಯೆಂದು ಅಲ್ಲ. ಹೀಗಿರಬೇಕು ಎಂದು. ಸಮೃದ್ಧಿಯನ್ನು ಹಾಡುವ ಗೀತೆಗಳೇ ಆಳದಲ್ಲಿ ಕೂಡಿಬಾಳುವ ತತ್ವಕ್ಕೆ ಬದಲಾಗಿ, ವಿದ್ವೇಷದ ಸಿದ್ಧಾಂತವನ್ನು ಒಳಗೊಂಡಿರಬಹುದು. ಬಹುತೇಕ ರಾಷ್ಟ್ರವಾದಿ ಗೀತೆಗಳಲ್ಲಿ ಧರ್ಮ ಜನಾಂಗ ಪ್ರದೇಶದ ನೆಲೆಯಲ್ಲಿ ಎನಿಮಿಟಿಯೂ ಇರುತ್ತದೆ. (ನ್ಯಾಯಪಥ, ಮೇ 2024)



## ಬಾಲ ಕಾರ್ಮಿಕ ಪದ್ಧತಿಯನ್ನು ಪ್ರತಿಯೊಬ್ಬರೂ ವಿರೋಧಿಸಿ : ನ್ಯಾ.ಪುಷ್ಪಾಂಜಲಿ ದೇವಿ ಕರೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಬಾಲ್ಯಾವ್ಯಸ್ಥೆಯಲ್ಲಿ ಮಕ್ಕಳು ಶಿಕ್ಷಣ ಪಡೆದು ವಿದ್ಯಾವಂತರಾಗಬೇಕೆಂದರೆ, ಪ್ರತಿಯೊಬ್ಬರು ಬಾಲ ಕಾರ್ಮಿಕ ಪದ್ಧತಿಯನ್ನು ವಿರೋಧ ಮಾಡಿ, ಮಕ್ಕಳಲ್ಲಿ ಶಿಕ್ಷಣದ ಕುರಿತು ಅರಿವು ಮೂಡಿಸಿ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಎಸ್.ಹೆಚ್.ಪುಷ್ಪಾಂಜಲಿ ದೇವಿ ಅವರು ಕರೆ ನೀಡಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕಾರ್ಮಿಕ ಇಲಾಖೆ, ಪೊಲೀಸ್ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನೆ, ಎಸ್‌ಜಿಆರ್‌ಸಿಎಂ ಕಾಲೇಜು ಮತ್ತು ವಿವಿಧ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ "ವಿಶ್ವ ಬಾಲಜಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ" ಅಂಗವಾಗಿ ಬುಧವಾರದಂದು ನಗರದ ಗೃಹರಕ್ಷಕ ದಳ ಆವರಣದಿಂದ ಏರ್ಪಡಿಸಿದ್ದ ಜನ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ಅವರು ಮಾತನಾಡಿದರು. 18 ವರ್ಷದೊಳಗಿನ ಮಕ್ಕಳನ್ನು ದುಡಿಮೆಗೆ ಕಳುಹಿಸದೆ ಪ್ರತಿಯೊಬ್ಬರು ಶಾಲೆಗೆ ಕಳುಹಿಸಿ ಶಿಕ್ಷಣ ಒದಗಿಸುವುದು ಎಲ್ಲಾ ಪೋಷಕರ ಕರ್ತವ್ಯವಾಗಿದೆ. ಮಕ್ಕಳನ್ನು ಕೆಲಸಕ್ಕೆ ಕಳುಹಿಸುವಂತಹ ಪೋಷಕರಿಗೆ ಮತ್ತು ಕೆಲಸಕ್ಕೆ ನೇಮಿಸಿಕೊಳ್ಳುವಂತಹ ಮಾಲೀಕರಿಗೆ ಕಾನೂನಿನಡಿ ಶಿಕ್ಷೆಗೆ ಒಳಪಡಿಸಲಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಧೀಶರಾದ ರಾಜೇಶ್ ಎನ್.ಹೊಸಮನೆ ಅವರು ಉದ್ಘಾಟಿಸಿ ಮಾತನಾಡಿ, ಸದೃಢ ದೇಶ ನಿರ್ಮಾಣ ಮಾಡುವಲ್ಲಿ ಮಕ್ಕಳ ಪಾತ್ರ ಬಹುಮುಖ್ಯವಾಗಿದ್ದು, ಮಕ್ಕಳು ಶಿಕ್ಷಣದಿಂದ ವಂಚಿತರಾಗದೆ, ವಿದ್ಯಾವಂತರಾದಾಗ ಮಾತ್ರ ಬಾಲ ಕಾರ್ಮಿಕ ಪದ್ಧತಿ ನಿವಾರಣೆಯಾಗುತ್ತದೆ ಎಂದು ಅಭಿಪ್ರಾಯ ಪಟ್ಟರು.

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಬಾಲ ಕಾರ್ಮಿಕ ಯೋಜನೆಯ ಅಧ್ಯಕ್ಷರೂ ಆದ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ವಿಜಯಲಕ್ಷ್ಮಿ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು.

**ಜಾಗೃತಿ ಜಾಥ:** ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಜಾಥಾದಲ್ಲಿ ಜನಸಾಮಾನ್ಯರಲ್ಲಿ ಅರಿವು ಮೂಡಿಸಲು ವಿವಿಧ ಘೋಷಣೆಗಳನ್ನು ಕೂಗಿದ್ದು ವಿಶೇಷವಾಗಿತ್ತು. ಚಿಗುರು ಕಲಾ ತಂಡದವರಿಂದ ಜಾಗೃತಿ ಗೀತೆಗಳನ್ನು ಹೇಳಿದರು. ಜಾಥಾವು ಜಿಲ್ಲಾ ಗೃಹ ರಕ್ಷಕ ದಳ ಕಚೇರಿ ಆವರಣದಿಂದ ಆರಂಭವಾಗಿ ಕೆಎಸ್‌ಆರ್‌ಟಿಸಿ ಹೊಸ ಬಸ್ ನಿಲ್ದಾಣ, ಉಜ್ಜಿನಿ ಶಾಲೆ, ಎಪಿಎಂಸಿ ವೃತ್ತ, ಲಾರಿ ಟರ್ಮಿನಲ್ ಮೂಲಕ ಎಸ್‌ಜಿಆರ್‌ಸಿಎಂ ಕಾಲೇಜಿನ ವೇದಿಕೆ ಸಭಾಂಗಣದವರೆಗೆ ತಲುಪಿತು.

ಜಿಲ್ಲಾಪಂಚಾಯತ್‌ನ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್, ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper
70,000
HAMPI TIMES E-PAPER READERS
94486 33038
NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:01 Volume:01 • ಸಂಚಿಕೆ:339 Issue:339 • ನೋಂದಣಿ ಸಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 13.06.2024 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2



S.M.TRADERS & SERVICES
ATLAS COPCO COMPRESSORS, HOSEPIPE, DRILL RODS, SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201

ಕನ್ನಡ ಟ್ಯೂಷನ್
KANNADA TUITION
Kannada Tuition Are Done Here
Kannada Language Tuition for 10th , PUC State, CBSE and ICSE
Syllabus are done here. with Individual attention, helping out students with their assignments
Betterment of Their Academic Performance
*****
For More Details
SUMALATHA B.M
94491 90966
N.C.Colony , HOSAPETE VIJAYANAGARA

ಬೇಕಾಗಿದ್ದಾರೆ
Marketing Executive
> Any Graduate Can apply
> Good communication & Convincing skills
> Ability to work independently
> Freeshers are Invited
GOAL STRATEGY PLAN
Attractive remuneration and Excellent career development opportunities wait to the right candidate
Job Location:
HOSAPETE - VIJAYANAGARA Dist.
94825 99089
94486 33038


# ಎಸ್ಸೆಸ್ಸೆಲ್ಸಿ ಪರೀಕ್ಷೆ 2 ನಿರ್ಭಯವಾಗಿರಲಿ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಸೂಚನೆ | 22 ಪರೀಕ್ಷಾ ಕೇಂದ್ರ | 6973 ವಿದ್ಯಾರ್ಥಿಗಳು ನೋಂದಣಿ

■ ಹಂಪಿ ಟೈಮ್ಸ್ ಹೊಸಪೇಟೆ

ಜೂನ್ 14 ರಿಂದ ಜೂನ್ 22ರವರೆಗೆ ಜಿಲ್ಲೆಯ ವಿವಿಧ ಕೇಂದ್ರಗಳಲ್ಲಿ ನಡೆಯುವ ಎಸ್ಸೆಸ್ಸೆಲ್ಸಿ ಪರೀಕ್ಷೆ 2 ಅಚ್ಚುಕಟ್ಟಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಹೇಳಿದರು.

ಶಾಲಾ ಶಿಕ್ಷಣ ಇಲಾಖೆಯಿಂದ ಜೂನ್ 12ರಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷಾ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಮಾರ್ಗಸೂಚಿಯನುಸಾರ ಪರೀಕ್ಷೆ ನಡೆಯಬೇಕು. ವಿದ್ಯಾರ್ಥಿಗಳು ನಿರ್ಭಯದಿಂದ ಪರೀಕ್ಷೆ ಬರೆಯುವಂತೆ ಪರೀಕ್ಷಾ ಕೇಂದ್ರಗಳಲ್ಲಿ ಶಾಂತಿ ಪಾಲನೆಗೆ ಸೂಕ್ತ ವ್ಯವಸ್ಥೆಯಾಗಬೇಕು. ಬೇರೆ ಬೇರೆ ಪರೀಕ್ಷಾ ಕಾರ್ಯಗಳಿಗೆ ನಿಯೋಜನೆಗೊಂಡ ವಿವಿಧ ಹಂತದ ಅಧಿಕಾರಿಗಳು ತಮ್ಮ ತಮ್ಮ ಕರ್ತವ್ಯ ಅರಿತು ಜವಾಬ್ದಾರಿ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಹೊಸಪೇಟೆ ತಾಲೂಕಿನಲ್ಲಿ 8, ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ 2, ಹರಪನಹಳ್ಳಿ ತಾಲೂಕಿನಲ್ಲಿ 5, ಹಡಗಲಿ ತಾಲೂಕಿನಲ್ಲಿ 3, ಕೂಡ್ಲಿಗಿ ತಾಲೂಕಿನಲ್ಲಿ 4 ಸೇರಿ ಒಟ್ಟು 22 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಈ ಪರೀಕ್ಷೆಗೆ 6,973 ವಿದ್ಯಾರ್ಥಿಗಳು ಹೆಸರು ನೋಂದಾಯಿಸಿ ಕೊಂಡಿದ್ದಾರೆ. ಈ ಪರೀಕ್ಷೆಗೆ ಕೇಂದ್ರ ಮುಖ್ಯ



ಅಧೀಕ್ಷಕರು, ಉಪ ಮುಖ್ಯ ಅಧೀಕ್ಷಕರು, ಸರಕಾರಿ ಮತ್ತು ಅನುದಾನಿತ ಪ್ರೌಢಶಾಲಾ ಮುಖ್ಯ ಗುರುಗಳನ್ನು ಮಂಡಳಿಯಿಂದ ನೇಮಕ ಮಾಡಲಾಗಿದೆ. ಪರೀಕ್ಷಾ ಕೊಠಡಿ ಮೇಲ್ವಿಚಾರಕರು ಪ್ರೌಢಶಾಲಾ ಸಹ ಶಿಕ್ಷಕರನ್ನು ನೇಮಕ ಮಾಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿ ನಿಯೋಜಿಸಲಾಗಿದೆ. ಮಾರ್ಗಾಧಿಕಾರಿಗಳ ನೇಮಕ ಮಾಡಲಾಗಿದೆ. ಪ್ರತಿ ಕೇಂದ್ರಕ್ಕೆ ಸ್ಥಾನಿಕ ಜಾಗೃತ ದಳವನ್ನು ನೇಮಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಯುವರಾಜ ನಾಯ್ಕ ಅವರು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸದಾಶಿವ ಪ್ರಭು ಬಿ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿಬಾಬು, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಲೀಂ ಪಾಶಾ, ವಿವಿಧ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಉಪ ಅಧೀಕ್ಷಕರು ಸೇರಿದಂತೆ ಇನ್ನಿತರ ಅಧಿಕಾರಿಗಳು ಇದ್ದರು.

### ಜೂ.14ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ

ಹಂಪಿ ಟೈಮ್ಸ್ ಹೊಸಪೇಟೆ

ವಿಜಯನಗರ ಜಿಲ್ಲಾದ್ಯಂತ ಜೂನ್ 14 ರಿಂದ ಜೂನ್ 22ರವರೆಗೆ 22 ಪರೀಕ್ಷಾ ಕೇಂದ್ರಗಳಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ-2 ನಡೆಯಲಿದ್ದು, ಈ ಪರೀಕ್ಷಾ ಕೇಂದ್ರಗಳ ಸುತ್ತಲು ಶಾಂತಿ ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಈ ಪರೀಕ್ಷಾ ಕೇಂದ್ರಗಳಲ್ಲಿ ನಡೆಯಬಹುದಾದ ಅವ್ಯವಹಾರಗಳನ್ನು ತಡೆಗಟ್ಟುವ ಸಂಬಂಧ ಪರೀಕ್ಷಾ ಕೇಂದ್ರಗಳ ಸುತ್ತಲು 200 ಮೀಟರ್ ಆವರಣವನ್ನು ನಿರ್ಬಂಧಿತ ಪ್ರದೇಶ ಎಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಆದೇಶ ಹೊರಡಿಸಿದ್ದಾರೆ. ಈ ಪರೀಕ್ಷಾ ಕೇಂದ್ರಗಳ ಸುತ್ತಲಿನ ಜೆರಾಕ್ಸ್, ಕಂಪ್ಯೂಟರ್, ಸೈಬರ್ ಸೆಂಟರಗಳು ಕಾರ್ಯನಿರ್ವಹಿಸದಂತೆ ನಿರ್ಬಂಧಿಸಲಾಗಿದೆ. ಈ ಪರೀಕ್ಷಾ ಕೇಂದ್ರಗಳ ಪ್ರದೇಶದಲ್ಲಿ ಯಾವುದೇ ಬಾಹ್ಯ, ಅನ್ಯ ವ್ಯಕ್ತಿಗಳಿಗೆ ಹಾಗೂ ಟೆಲಿವಿಷನ್ ಮಾಧ್ಯಮದವರು ಮತ್ತು ಪತ್ರಕರ್ತರಿಗೆ ಪ್ರವೇಶ ನಿಷೇಧಿಸಿದೆ. ಈ ಆದೇಶವು ಎಸ್ಸೆಸ್ಸೆಲ್ಸಿ ಪರೀಕ್ಷೆ-2ರ ಮೇಲ್ವಿಚಾರಣೆ ಕಾರ್ಯನಿರ್ವಹಿಸುವ ಅಧಿಕಾರಿ ಸಿಬ್ಬಂದಿಗೆ ಅನ್ವಯಿಸುವುದಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

# ಹಿಂದುಳಿದ ಜಿಲ್ಲೆಗಳಲ್ಲಿನ ರೈಲ್ವೆ ಕಾಮಗಾರಿಗಳ ವೇಗ ಹೆಚ್ಚಲಿ

## ವಿಜಯನಗರ ರೈಲ್ವೇ ಅಭಿವೃದ್ಧಿ ಕ್ರಿಯಾ ಸಮಿತಿ ಆಗ್ರಹ

■ ಹಂಪಿ ಟೈಮ್ಸ್ ಹೊಸಪೇಟೆ

ತುಮಕೂರು ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿರುವ ವಿ.ಸೋಮಣ್ಣ ನವರನ್ನು ರೈಲ್ವೇ ಖಾತೆಯ ರಾಜ್ಯ ಸಚಿವರನ್ನಾಗಿ ನೇಮಕ ಮಾಡಿರುವುದು



ಸ್ವಾಗತಾರ್ಹ. ನೆರೆ ರಾಜ್ಯಗಳಿಗೆ ಹೋಲಿಸಿದಾಗ ರೈಲ್ವೇ ಅಭಿವೃದ್ಧಿಯಲ್ಲಿ ಕರ್ನಾಟಕವು ಬಹಳಷ್ಟು ಹಿಂದುಳಿದಿದೆ. ನೂತನ ರೈಲ್ವೆ ರಾಜ್ಯ ಸಚಿವರು ಅರ್ಧಕ್ಕೆ ನಿಂತ ರಾಜ್ಯದ ರೈಲ್ವೆ ಯೋಜನೆಗಳನ್ನು ಪೂರ್ಣಗೊಳಿಸುವುದರ ಜೊತೆಗೆ ಹೊಸದಾಗಿ ಹಿಂದುಳಿದ ಜಿಲ್ಲೆಗಳಲ್ಲಿ ಜಾಲ ವಿಸ್ತರಿಸಬೇಕು ಎಂದು ವಿಜಯನಗರ ರೈಲ್ವೇ ಅಭಿವೃದ್ಧಿ ಕ್ರಿಯಾ ಸಮಿತಿ ಒತ್ತಾಯಿಸಿದೆ. 2019-20ರಲ್ಲಿ ಕೇಂದ್ರ ಮಂತ್ರಿಮಂಡಲದಲ್ಲಿ ರೈಲ್ವೇ ಖಾತೆ ರಾಜ್ಯ ಸಚಿವರಾಗಿದ್ದ ದಿ.ಸುರೇಶ್ ಅಂಗಡಿಯವರು ಅಲ್ಪಾವಧಿಯಲ್ಲೆ ರಾಜ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ರೈಲ್ವೇ ಯೋಜನೆಗಳ ಅನುಷ್ಠಾನಕ್ಕೆ ಶ್ರಮಿಸಿದರು. ಆದರೆ ಅವರ ಅಕಾಲಿಕ ನಿಧನದಿಂದ ಹಲವು ಯೋಜನೆಗಳು ಅರ್ಧಕ್ಕೆ ನಿಂತಿವೆ. ವಿಶೇಷವಾಗಿ ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳಿಂದ ಕಬ್ಬಿಣದ ಅದಿರು ಕೈಗಾರಿಕಾ ಉತ್ಪನ್ನಗಳ ಸರಕು ಸಾಗಾಣಿಕೆ ಯಿಂದ ನೈರುತ್ಯ ರೈಲ್ವೇ ವಲಯಕ್ಕೆ ಅತ್ಯಧಿಕ ಆದಾಯ ಇದ್ದರೂ ತ್ರೀವಳಿ ಜಿಲ್ಲೆಗಳಿಗೆ ಕೆಲವು ಬೇಡಿಕೆಗಳು ಮರೀಚಿಕೆಯಾಗಿ ಉಳಿದಿವೆ. ಈ ನಿಟ್ಟಿನಲ್ಲಿ ಸಚಿವರು ಗಮನಹರಿಸಿ ಮೂರು ಜಿಲ್ಲೆಗಳಿಗೆ ಅಗತ್ಯವಾಗಿರುವ ರೈಲ್ವೇ ಸೌಲಭ್ಯಗಳ ಅನುಷ್ಠಾನಕ್ಕೆ ಗಮನಹರಿಸಬೇಕೆಂದು ಸಮಿತಿ ಆಗ್ರಹಿಸುತ್ತದೆ.

# ನಾಡೋಜ ರಾಜೀವ್ ತಾರಾನಾಥ್‌ಗೆ ಕನ್ನಡ ವಿಶ್ವವಿದ್ಯಾಲಯ ಸಂತಾಪ



■ ಹಂಪಿ ಟೈಮ್ಸ್ ಹೊಸಪೇಟೆ

ಅತ್ಯಂತ ಸರಳತೆ ಮತ್ತು ಶ್ರೇಷ್ಠ ಸಂಗೀತಕ್ಕೆ ಹೆಸರಾಗಿದ್ದ ಅವರು ಕರ್ನಾಟಕದ ಹೆಮ್ಮೆಯ ಕಲಾವಿದರಲ್ಲಿ ಒಬ್ಬರು, ನಾಡಿನ ಸಾಂಸ್ಕೃತಿಕ ಲೋಕಕ್ಕೆ ಅವರ ಕೊಡುಗೆ ಅಪಾರವಾದ್ದು ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ವಿಜಯ್ ಪೂಣಚ್ಚ ತಂಬಂಡ ಅವರು ತಿಳಿಸಿದರು. ಕನ್ನಡ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ನಾಡೋಜ ಪಂಡಿತ್ ರಾಜೀವ್ ತಾರಾನಾಥ್ ಅವರ ಗೌರವಾರ್ಥ ಸಂತಾಪ ಸೂಚಕ ಸಭೆಯಲ್ಲಿ ಮಾತನಾಡಿದರು. ಪಂಡಿತ್ ರಾಜೀವ್ ತಾರಾನಾಥ್ ಅವರು ಸಂಗೀತ ಲೋಕದಲ್ಲಷ್ಟೇ ಅಲ್ಲದೆ, ಇಂಗ್ಲಿಷ್ ಪ್ರಾಧ್ಯಾಪಕರಾಗಿ, ಅನುವಾದಕರಾಗಿ ಸಾಹಿತ್ಯ ಕ್ಷೇತ್ರದಲ್ಲೂ ಸಾಕಷ್ಟು ಕೆಲಸ ಮಾಡಿದ್ದು, ಅವರ ಸಾಧನೆಯನ್ನು ಗುರುತಿಸಿ ಕನ್ನಡ ವಿಶ್ವವಿದ್ಯಾಲಯವು 'ನಾಡೋಜ' ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ಅವರ ಅಗಲಿಕೆಯಿಂದ ಇಂದು ಸಂಗೀತ ಲೋಕಕ್ಕೆ ತುಂಬಲಾರದ ನಷ್ಟ ಉಂಟಾಗಿದೆ. ಮೃತರ ಆತ್ಮಕ್ಕೆ ಭಗವಂತ ಶಾಂತಿ ಕರುಣಿಸಲಿ ಹಾಗೂ ಕುಟುಂಬಕ್ಕೆ ದುಃಖ ಸಹಿಸಿಕೊಳ್ಳುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸಿದರು. ಈ ಸಂತಾಪ ಸೂಚಕ ಸಭೆಯಲ್ಲಿ ವಿವಿಧ ನಿಕಾಯದ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು, ಸಿಬ್ಬಂದಿಗಳು ಸಂಶೋಧಾನಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಮಕ್ಕಳನ್ನು ದುಡಿಮೆಗೆ ಹಚ್ಚಬೇಡಿ ಮಗುವಿನ ಭವಿಷ್ಯ ಶಿಕ್ಷಣದಲ್ಲಿದೆ




ಹಂಪಿ ಟೈಮ್ಸ್ ಹೊಸಪೇಟೆ

ಮಕ್ಕಳನ್ನು ದುಡಿಮೆಗೆ ಹಚ್ಚದೇ ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಂಡು ಸರಿಯಾದ ಶಿಕ್ಷಣ ನೀಡಿದರೆ, ಮಕ್ಕಳು ಉತ್ತಮ ಪ್ರಜೆಗಳಾಗುವುದರೊಂದಿಗೆ ದೇಶದ ಆಸ್ತಿಯಾಗಬಲ್ಲರು ಎಂದು ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವೆಗಳ ಸಮಿತಿಯ ಅಧ್ಯಕ್ಷರಾದ ಹೇಮಲತಾ ಬಿ. ಹುಲ್ಲೂರ ಅಭಿಪ್ರಾಯಪಟ್ಟರು

ಹೊಸಪೇಟೆಯ ಸರ್ದಾರ್ ಪಟೇಲ್ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಹೊಸಪೇಟೆ ತಾಲೂಕು ಕಾನೂನು ಸೇವಾ ಸಮಿತಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ವಕೀಲರ ಸಂಘ ಹೊಸಪೇಟೆ, ಜಿಲ್ಲಾ ಕಾರ್ಮಿಕ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಡಾನ್ ಬೋಸ್ಕೋ ಸಂಸ್ಥೆ ಸೇರಿದಂತೆ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಜೂನ್ ಬುಧವಾರ ಹಮ್ಮಿಕೊಂಡಿದ್ದ “ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಜಾಥಕ್ಕೆ ಚಾಲನೆ ನೀಡಿ ಮಾತನಾಡಿದರು.

ಈ ಮೊದಲು ಬಾಲ ಕಾರ್ಮಿಕರು ಕೃಷಿ ಚಟುವಟಿಕೆಯಲ್ಲಿ ಹೆಚ್ಚು ಕಾಣಸಿಗುತ್ತಿದ್ದರು. ಈಗ ಹೆಚ್ಚಾಗಿ ಗ್ಯಾರೇಜ್, ಹೋಟೆಲ್‌ಗಳಲ್ಲಿ ಕೆಲಸ ಮಾಡುವುದು ರೂಢಿಯಾಗುತ್ತಿದೆ. ಇದಕ್ಕೆ ಕಾರಣ ಬಡತನ ಇರಬಹುದು ಆದರೆ ಯಾವುದೇ ಮಗುವು ಶಿಕ್ಷಣದಿಂದ ವಂಚಿತವಾಗಬಾರದು. ಮಕ್ಕಳು ಸಂವಿಧಾನಬದ್ಧ ಮೂಲಭೂತ ಹಕ್ಕುಗಳಿಗೆ ಬದ್ಧರಾಗಿದ್ದಾರೆ. ಅವರಿಗೆ ಪ್ರತಿಯೊಂದು ಸೌಲಭ್ಯ ಸಿಗುವಂತಾಗಬೇಕು ಎಂದು ಸಲಹೆ ಮಾಡಿದರು.

ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರಾದ ಅಶೋಕ್ ಹೆಚ್.ಆರ್. ಮಾತನಾಡಿ, ಮಕ್ಕಳು ಕಟ್ಟಡ ಕೆಲಸದಲ್ಲಿ, ಅಂಗಡಿಗಳಲ್ಲಿ, ಬೇಕರಿ, ದೊಡ್ಡ ದೊಡ್ಡ ಮನೆಗಳಲ್ಲಿ ಹಾಗೂ ಇನ್ನೀತರ ಸ್ಥಳಗಳಲ್ಲಿ ದೈಹಿಕವಾಗಿ ಹಾಗೂ ಮಾನಸಿಕವಾಗಿ ಕೆಲಸದಾಳುಗಳಾಗಿದ್ದಾರೆ. ಇಂತಹ ಅನಿಷ್ಠ ಬಾಲ ಕಾರ್ಮಿಕ ಪದ್ಧತಿಯ ಪಿಡುಗನ್ನು ಹೋಗಲಾಡಿಸಬೇಕು ಎಂದು ಹೇಳಿದರು.

ಬಳಿಕ ಡಾನ್ ಬೋಸ್ಕೋ ಸಂಸ್ಥೆಯಲ್ಲಿ ನಡೆದ ವೇದಿಕೆಯ ಕಾರ್ಯಕ್ರಮಕ್ಕೆ ವಿಜಯನಗರ ಉಪ ವಿಭಾಗದ ಕಾರ್ಮಿಕ ಅಧಿಕಾರಿ ಸೂರ್ಯಪ್ಪ ಡೊಂಬರಮತ್ತೂರ ಮಾತನಾಡಿದರು.

ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಪ್ರಶಾಂತ್ ನಾಗಲಾಪುರ, ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರಾದ ಚೈತ್ರ. ಜೆ., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಶ್ವೇತಾ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸುದೀಪ್ ಕುಮಾರ್ ಉಂಕಿ, ಹೊಸಪೇಟೆ ವಕೀಲರ ಸಂಘದ ಅಧ್ಯಕ್ಷರಾದ ಕೆ.ಪ್ರಹ್ಲಾದ್, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಪಿ.ಶ್ರೀನಿವಾಸಮೂರ್ತಿ, ಹೊಸಪೇಟೆಯ ಪಟ್ಟಣ ಪೊಲೀಸ್ ಠಾಣೆಯ ಪೊಲೀಸ್ ಇನ್ಸಪೆಕ್ಟರ್ ಲಕನ್ ಆರ್.ಮಸುಗುಪ್ಪಿ, ಹೊಸಪೇಟೆ ಪೊಲೀಸ್ ಠಾಣೆಯ ಸಂಚಾರಿ ವಿಭಾಗದ ಪೊಲೀಸ್ ಇನ್ಸಪೆಕ್ಟರ್ ರವೀಂದ್ರ ವೈ.ವಿ., ಡಾನ್ ಬೋಸ್ಕೋ ಸಂಸ್ಥೆಯ ನಿರ್ದೇಶಕರಾದ ಪಾ.ರೋಷನ್, ಸಮಾಜ ಕಾರ್ಯ ವಿಭಾಗದ ನಿರ್ದೇಶಕರಾದ ಪಾ.ಪ್ರಾನ್ಸಿಸ್ ಉಪಸ್ಥಿತರಿದ್ದರು. ವಕೀಲರ ಸಂಘದ ಸದಸ್ಯರಾದ ಎ ಕರುಣಾನಿಧಿ ಅವರು ವಿಶೇಷ ಉಪನ್ಯಾಸ ನೀಡಿದರು.

# ಹಮಾರೆ ಬಾರಾಹ್ ಪ್ರದರ್ಶನ ನಿಷೇಧ : ಡಿಸಿ ಮಿಶ್ರಾ ಆದೇಶ

■ ಹಂಪಿ ಟೈಮ್ಸ್ ಬಳ್ಳಾರಿ

ಮುಸ್ಲಿಂಸಮುದಾಯಗಳಿಗೆಧಕ್ಕೆತರುವಂತಹಅಂಶಗಳನ್ನೊಳಗೊಂಡಿರುವ 'ಹಮಾರೆ ಬಾರಾಹ್' ಚಲನಚಿತ್ರವನ್ನು ಕರ್ನಾಟಕ ಸಿನಿಮಾ (ರೆಗ್ಯೂಲೇಶನ್) ಆಕ್ಟ್ - 1964ರ ಸೆಕ್ಷನ್ -15(1) ಮತ್ತು 15(5) ರ ಅಡಿ ಚಲನಚಿತ್ರದ ಟ್ರೈಲರ್ ಹಾಗೂ ಚಲನಚಿತ್ರವನ್ನು ಎರಡು ವಾರಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಬಳ್ಳಾರಿ ಜಿಲ್ಲೆಯ ಯಾವುದೇ ಎಲೆಕ್ಟ್ರಾನಿಕ್ ಮಾಧ್ಯಮ, ಸಾಮಾಜಿಕ ಜಾಲತಾಣ, ಸಿನಿಮಾ ಮಂದಿರಗಳು, ಖಾಸಗಿ ಟಿವಿ ಚಾನೆಲ್‌ಗಳು ಮತ್ತು ಇತರೆ ಮಾಧ್ಯಮಗಳ ಮೂಲಕ ಪ್ರಸಾರ ಮಾಡುವುದನ್ನು ನಿಷೇಧಿಸಿ ಜಿಲ್ಲಾ ದಂಡಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

### ಮೈಕ್ರೋ ನ್ಯೂಸ್

## ಜೂ.15 ರಂದು ತಿಂಗಳ ಸೊಬಗು ಸಾಂಸ್ಕೃತಿಕ ಕಾರ್ಯಕ್ರಮ

ಹಂಪಿ ಟೈಮ್ಸ್ ಬಳ್ಳಾರಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಸಾಂಸ್ಕೃತಿಕ ಸಮುಚ್ಛಯ ನಿರ್ವಹಣಾ ಸಮಿತಿ ವತಿಯಿಂದ ಕಲಾ ಪ್ರತಿಭೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಜೂನ್ 15 ರಂದು ಸಂಜೆ 06.30 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ರಸ್ತೆಯ ನಾಡೋಜ ಸುಭದ್ರಮ್ಮ ಮನ್ಸೂರು ಬಯಲು ರಂಗಮಂದಿರ ಸಾಂಸ್ಕೃತಿಕ ಸಮುಚ್ಚಯದಲ್ಲಿ 'ತಿಂಗಳ ಸೊಬಗು' ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಿರುಗುಪ್ಪದ ಕೆ.ನರಸಿಂಹಮೂರ್ತಿ ಅವರಿಂದ ಹಾಸ್ಯ ಚಟಾಕಿಗಳು, ಸುಜಾತ ಕಲಾ ಟ್ರಸ್ಟ್ ವತಿಯಿಂದ ಸಮೂಹ ನೃತ್ಯ ಮತ್ತು ಜೀ ಕನ್ನಡ ಸರಿಗಮಪ ಸೀಜನ್ 19 ಸ್ಪರ್ಧಾಳು ಕುಮಾರಿ ಸೃಷ್ಟಿ ಸುರೇಶ್ ಅವರಿಂದ ಸುಗಮ ಸಂಗೀತ ಕಾರ್ಯಕ್ರಮ ಇರಲಿವೆ. ಸಾರ್ವಜನಿಕರಿಗೆ ಪ್ರವೇಶ ಮುಕ್ತವಾಗಿದೆ ಎಂದು ಕೋರಲಾಗಿದೆ.

# ಶಿಕ್ಷಣದಿಂದ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಸಾಧ್ಯ : ಡಾ. ವಿಜಯ್

ಹಂಪಿ ಟೈಮ್ಸ್ ಹೊಸಪೇಟೆ

ಬಾಲಕಾರ್ಮಿಕ ಪದ್ಧತಿಯು ಜಾಗತಿಕ ಸಮಸ್ಯೆಯಾಗಿದೆ. ಮಕ್ಕಳಲ್ಲಿ ಶಿಕ್ಷಣದ ಮೂಲಕ ಅರಿವು ಮೂಡಿಸಿದರೆ, ಬಾಲಕಾರ್ಮಿಕರ ಪದ್ಧತಿಯನ್ನು ಕೊನೆಗಾಣಿಸಲು ಸಾಧ್ಯವಾಗುತ್ತದೆ ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಸಚಿವ ಡಾ.ವಿಜಯ್ ಪೂಣಚ್ಚ ತಂಬಂಡ ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಬುಧವಾರ ಆಯೋಜಿಸಲಾಗಿದ್ದ ವಿಶ್ವ ಬಾಲಕಾರ್ಮಿಕ ವಿರೋಧಿ ದಿನದ ಅಂಗವಾಗಿ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿ, ಮಾತನಾಡಿದ ಅವರು, ಪ್ರತಿ ವರ್ಷ ಜೂನ್ 12 ರಂದು ಈ ದಿನವನ್ನು ಆಚರಿಸಲಾಗುತ್ತಿದೆ. ಸಾರ್ವಜನಿಕರಿಗೆ ಬಾಲ ಕಾರ್ಮಿಕರ ಸಮಸ್ಯೆಯ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯವಿದೆ. ಪತ್ರಿಯೊಂದು ಮಗುವಿಗೂ ಶಿಕ್ಷಣದ ಹಕ್ಕಿದೆ. ಈ ನಿಟ್ಟಿನಲ್ಲಿ



ನಮ್ಮ ಸುತ್ತಮುತ್ತಲಿನ ಅಂಗಡಿ, ಹೋಟೆಲ್, ಗ್ಯಾರೇಜ್ ಮತ್ತು ಇತರೆ ಸ್ಥಳಗಳಲ್ಲಿ ದುಡಿಯುವ ಮಕ್ಕಳನ್ನು ಗುರುತಿಸಿ, ಅವರಿಗೆ ಶಿಕ್ಷಣ ನೀಡುವ ಜವಾಬ್ದಾರಿ ನಮ್ಮ ಮೇಲೆ ಇದೆಯೆಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ವಿವಿಧ ನಿಕಾಯದ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು, ಸಿಬ್ಬಂದಿಗಳು ಸಂಶೋಧಾನಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಅತಿಥಿ ಶಿಕ್ಷಕರ ನೇಮಕಕ್ಕೆ ಅರ್ಜಿ ಆಹ್ವಾನ

ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ತಾಲ್ಲೂಕಿನ ಹನಕುಂಟಿ ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 2024-25 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಖಾಲಿ ಇರುವ ವಿಷಯಗಳಿಗೆ ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳನ್ನು ಕ.ವ.ಶಿ.ಸ ಸಂಘ ಬೆಂಗಳೂರು ಇವರ ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳಲಾಗುವುದು ಹಾಗೂ ಮಹಿಳೆಯರಿಗೆ ಪ್ರಥಮ ಆದ್ಯತೆ ನೀಡಲಾಗುವುದು. ಗಣಕಯಂತ್ರ ಮತ್ತು ಗಣಿತ ವಿಷಯಕ್ಕೆ ಬಿ.ಎಸ್‌ಸಿ-ಸಿ.ಎಸ್/ಬಿ.ಎಸ್‌ಸಿ-ಐ.ಎಸ್/ ಬಿ.ಇ-ಸಿ.ಎಸ್/ ಬಿಸಿಎ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜೂನ್ 20 ಕೊನೆಯ ದಿನವಾಗಿದ್ದು, ಆಸಕ್ತರು ಅಗತ್ಯ ದಾಖಲೆಗಳೊಂದಿಗೆ ಪ್ರಾಂಶುಪಾಲರು, ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹನಕುಂಟಿ ತಾ|ಜಿ ಕೊಪ್ಪಳ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊ.ಸಂ : 9620982291, 9538241419 ಗೆ ಸಂಪರ್ಕಿಸಬಹುದು ಎಂದು ವಸತಿ ಶಾಲೆಯ ಪ್ರಾಂಶುಪಾಲರು ತಿಳಿಸಿದ್ದಾರೆ.

# ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಆಯೋಗ ರಾಷ್ಟ್ರೀಯ ಲೋಕ ಅದಾಲತ್

■ ಹಂಪಿ ಟೈಮ್ಸ್ ಬಳ್ಳಾರಿ

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಇವರ ನಿರ್ದೇಶನದಂತೆ, ಬಳ್ಳಾರಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಿಂದ ಜುಲೈ 13 ರಂದು ರಾಷ್ಟ್ರೀಯ ಲೋಕ ಅದಾಲತ್‌ನ್ನು ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿರುವ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಕಚೇರಿಯಲ್ಲಿ ಏರ್ಪಡಿಸಲಾಗಿದೆ.

ಅದಾಲತ್‌ನಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ಉಭಯ ಪಕ್ಷಗಾರರು ಹಾಗೂ ವಕೀಲರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದು ಎಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಎನ್.ತಿಪ್ಪೇಸ್ವಾಮಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ನೀವು ಜಾಹೀರಾತು ನೀಡಲು ಬಯಸುತ್ತೀರಾ?
are you want place native advertisements
Contact for Details
94825 99089
94486 33038




ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ

ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.

Only Admins can Send Messages to this Group

Join for to Get Daily E-paper

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**13–06–2024 – ಗುರುವಾರ**

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪೂರ್ವಪಾಲ್ಗುಣ |
| ಯೋಗ | : ವಜ್ರ |
| ಕರಣ | : ಗರಜ |
| ಸೂರ್ಯೋದಯ | : 05:42:03 |
| ಸೂರ್ಯಾಸ್ತ | : 19:12:16 |
| ರಾಹು | : 14:08–15:50 |
| ಯಮಘಂಡ | : 05:42–07:23 |
| ಗುಳಿಕ | : 09:05–10:46 |

## ತುಂಗಭದ್ರಾ ನೀರಿನ ಮಟ್ಟ



**ಬುಧವಾರ : 12–06–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1581.58 ಅಡಿ |
| ಒಳ ಹರಿವು | 4266 ಕ್ಯುಸೆಕ್ |
| ಹೊರ ಹರಿವು | 9 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 5.289 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1581.09 ಅಡಿ |
| ಒಳ ಹರಿವು | 449 ಕ್ಯುಸೆಕ್ |
| ಹೊರ ಹರಿವು | 244 ಕ್ಯುಸೆಕ್ |
| ಸಾಮರ್ಥ್ಯ | 5.024 ಟಿಎಂಸಿ |

## ಕವಿ ಮನಸು

### ನೋವಿನ ಪೆಟ್ಟು

ಹಳೆ ಮಾಸಿದ ಬಟ್ಟೆಯಿಂದ,
ಎನ್ನ ಮೈ ಮಾಸ ಒರೆಸಿದರು.
ನೀರೆರೆದು ಹಳೆಯ ಹರಕು
ಸೀರೆಯ ತೊಟ್ಟಿಲ ಕಟ್ಟಿದರು.

ಕಂಡ ಕಂಡವರೆಲ್ಲ ಬಂದು,
ನಸು ನಕ್ಕು ಹೊಗಳಿದರು.
ಸಂಬಂಧಗಳ ಸರಮಾಲೆ ಹಾಕಿ,
ಈ ಉಸಿರಿಗೆ ಹೆಸರು ಕೊಟ್ಟರು.

ಏನೂ ತಿಳಿಯದ ನನಗೆ,
ಚಲುವೆ ಚಂದುಳ್ಳಿಯೆಂದು
ಹೊಗಳುತ್ತ, ತೆಗಳುತ್ತ,
ದುಡಿತ ಹಚ್ಚಿದರು ಬೆಳೆಸುತ್ತ.

ಹದಿಹರೆಯದಿ ಕಲಿವಾಸೆಗೆ,
ತಗಲಿದ ನಿರಾಸೆಯ ಬೆಂಕಿ.
ಹೆತ್ತವರ ಋಣಕೆ ಸೋತು
ಹತ್ತಿಕ್ಕಿ ಬಚ್ಚಿಟ್ಟ ಆಶೆಗಳ ಕಂತೆ.

ಸತ್ಯ ಸಾತ್ವಿಕರೆಲ್ಲ ಬಹುದೂರ.
ಕಾಮುಕರಿಗಿಲ್ಲ ಸರಿ ನೋಟ
ನೋವಲ್ಲಿಯೇ ಸಾಗಿಹುದೆನ್ನ
ಸತ್ತಿರುವ ನೈಜ ಬದುಕಿನ ಓಟ.

ಕಾಪಾಡಲು ಎಷ್ಟೇ ಪ್ರಯತ್ನ ಪಟ್ಟೆ,
ಹರಿದೋಯಿತು ಉಟ್ಟಿರುವ ಬಟ್ಟೆ.
ಪಟ್ಟ ನೋವಿನಲಿ ಕಣ್ಮುಚ್ಚಿ ಬಿಟ್ಟೆ.
ಉಳಿದುದೆಲ್ಲ, ಸೃಷ್ಟಿ ಕರ್ತನಿಗೆ ಬಿಟ್ಟೆ.

– ಲಕ್ಷ್ಮೀಸುತ ಸಾರವಾಡ

# ವಿಜಯನಗರ ಜಿಲ್ಲೆಯ 142 ಶಾಲೆಗಳಲ್ಲಿ ಎಲ್‌ಕೆಜಿ, ಯುಕೆಜಿ ತರಗತಿ ಪ್ರಾರಂಭ

## ಕಲ್ಯಾಣ ಕರ್ನಾಟಕ ಭಾಗದಲ್ಲಿ ಅಂಗನವಾಡಿ ಮೇಲಿನ ಅಧಿಕ ಹೊರೆ ಸಹ ತಪ್ಪಲಿದೆ

## ಶಾಲಾ ಶಿಕ್ಷಣ ಇಲಾಖೆಯ ಕಲಬುರಗಿ ವಿಭಾಗದ ಅಪರ ಆಯುಕ್ತ ಡಾ.ಆಕಾಶ ಎಸ್. ಹೇಳಿಕೆ

**ಹಂಪಿ ಟೈಮ್ಸ್ ಹೊಸಪೇಟೆ**

ರಾಜ್ಯ ಸರ್ಕಾರವು ಕಲಬುರಗಿ ವಿಭಾಗದ 1,008 ಆಯ್ದ ಪ್ರಾಥಮಿಕ ಶಾಲೆಗಳಲ್ಲಿ ಎಲ್.ಕೆ.ಜಿ–ಯು.ಕೆ.ಜಿ. ತರಗತಿಗೆ ಅನುಮತಿ ನೀಡಿರುವ ಹಿನ್ನೆಲೆಯಲ್ಲಿ ವಿಜಯನಗರ ಜಿಲ್ಲೆಯಲ್ಲಿ 142 ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ (ಎಲ್.ಕೆ.ಜಿ–ಯು.ಕೆ.ಜಿ.) ತರಗತಿಗಳನ್ನು ಪ್ರಾರಂಭಿಸಲಾಗುವುದು ಎಂದು ಶಾಲಾ ಶಿಕ್ಷಣ ಇಲಾಖೆಯ ಕಲಬುರಗಿ ವಿಭಾಗದ ಅಪರ ಆಯುಕ್ತ ಡಾ.ಆಕಾಶ ಎಸ್. ತಿಳಿಸಿದ್ದಾರೆ.



ಪ್ರಾಥಮಿಕ ಹಂತದಲ್ಲಿಯೆ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಬೇಕು ಮತ್ತು ಆರಂಭದಲ್ಲಿಯೆ ಮಕ್ಕಳು ಕಲಿಕೆಯಿಂದ ಹಿಂದುಳಿಯಬಾರದೆಂಬ ಸದುದ್ದೇಶದಿಂದ ರಾಜ್ಯ ಸರ್ಕಾರವು ಪ್ರಸಕ್ತ 2024–25ನೇ ಸಾಲಿನಲ್ಲಿ ಕಲಬುರಗಿ ವಿಭಾಗದ ಆಯ್ದ 1,008 ಪ್ರಾಥಮಿಕ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ (ಎಲ್.ಕೆ.ಜಿ–ಯು.ಕೆ.ಜಿ.) ತರಗತಿಗಳನ್ನು ಪ್ರಾರಂಭಿಸಲು ಅನುಮತಿ ನೀಡಿದ್ದು, ಅದರಂತೆ ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಎಲ್.ಕೆ.ಜಿ–ಯು.ಕೆ.ಜಿ. ತರಗತಿಗಳನ್ನು ಪ್ರಾರಂಭಿಸಲಾಗುತ್ತಿದೆ.

ಸರ್ಕಾರದ ಆದೇಶ ದಿನಾಂಕ: 11.06.2024ರ ಪ್ರಕಾರ ಬೀದರ ಜಿಲ್ಲೆಯಲ್ಲಿ 98, ಬಳ್ಳಾರಿಯಲ್ಲಿ 119, ಕಲಬುರಗಿಯಲ್ಲಿ 234, ಕೊಪ್ಪಳದಲ್ಲಿ 131, ರಾಯಚೂರಿನಲ್ಲಿ 190, ವಿಜಯನಗರದಲ್ಲಿ 142 ಹಾಗೂ ಯಾದಗಿರಿ ಜಿಲ್ಲೆಯಲ್ಲಿ 94 ಸೇರಿದಂತೆ ಒಟ್ಟಾರೆ ವಿಭಾಗದ 1,008 ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆ ಆರಂಭಕ್ಕೆ ಅನುಮತಿ ದೊರೆತಿದೆ. ಆರಂಭಿಕ ಹಂತದಿಂದಲೇ ಭದ್ರ ಬುನಾದಿ ಹಾಕುವ ನಿಟ್ಟಿನಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಅರ್ಹ ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲಾಗುತ್ತಿದೆ. ಈ ಮೂಲಕ ಮಕ್ಕಳಿಗೆ ಅದರಲ್ಲೂ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಾತ್ಮಕ "ಆರಂಭಿಕ ಶಿಕ್ಷಣದ" ಸೌಲಭ್ಯವನ್ನು ಕಲ್ಪಿಸಿಕೊಡುವುದು ಸರ್ಕಾರದ ಅಭಿಲಾಷೆಯಾಗಿದೆ. ಇದಕ್ಕಾಗಿ ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯು ಸಹ "ಅಕ್ಷರ ಆವಿಷ್ಕಾರ" ಕಾರ್ಯಕ್ರಮದ ಮೂಲಕ ಕೈಜೋಡಿಸಿದೆ.

ರಾಜ್ಯದಲ್ಲಿ ಈಗಾಗಲೇ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಎಲ್.ಕೆ.ಜಿ–ಯು.ಕೆ.ಜಿ ತರಗತಿಗಳು ನಡೆಯುತ್ತಿವೆ. ಅಲ್ಲಿ ದಾಖಲಾದ ಮಕ್ಕಳ ವಿವರಗಳನ್ನು ಅವಲೋಕಿಸಿದಾಗ, ಕಲ್ಯಾಣ ಕರ್ನಾಟಕ ವಿಭಾಗದಲ್ಲಿ ಅದರ ಸಂಖ್ಯೆ ತೀರಾ ಕಡಿಮೆ ಇದೆ ಎಂಬುದು ಅಂಕಿ–ಸಂಖ್ಯೆಯಿಂದ ಗೊತ್ತಾಗುತ್ತದೆ. ಬೆಂಗಳೂರು ವಿಭಾಗದಲ್ಲಿ 3,073 ಶಾಲೆಗಳಲ್ಲಿ ಅತೀ ಹೆಚ್ಚು 1,71,523 ಮಕ್ಕಳು ಪ್ರವೇಶ ಪಡೆದರೆ, ಕಲಬುರಗಿ ವಿಭಾಗದಲ್ಲಿ 967 ಶಾಲೆಗಳಲ್ಲಿ 32,805 ಅತೀ ಕಡಿಮೆ ಮಕ್ಕಳು ಪ್ರವೇಶಾತಿ ಪಡೆಯುತ್ತಿದ್ದಾರೆ. ಧಾರವಾದ ವಿಭಾಗದಲ್ಲಿ 1,102 ಶಾಲೆಗಳಲ್ಲಿ 48,805 ಮಕ್ಕಳು ಮತ್ತು ಮೈಸೂರು ವಿಭಾಗದಲ್ಲಿ 1,099 ಶಾಲೆಗಳಲ್ಲಿ 57,569 ಮಕ್ಕಳು ಎಲ್.ಕೆ.ಜಿ–ಯು.ಕೆ.ಜಿ. ಪ್ರವೇಶಾತಿ ಪಡೆಯು ತ್ತಿದ್ದಾರೆ. ಇನ್ನು ಅಂಗನವಾಡಿಗಳಲ್ಲಿ 6 ತಿಂಗಳಿ ನಿಂದ 6 ವರ್ಷ ವರೆಗಿನ ಮಕ್ಕಳ ದಾಖಲಾತಿ ಪ್ರಮಾಣ ನೋಡಿದಾಗ ಬೆಂಗಳೂರು ವಿಭಾಗದಲ್ಲಿ ಶೇ.40.94, ಧಾರವಾಡ ವಿಭಾಗದಲ್ಲಿ ಶೇ.61.61, ಮೈಸೂರು ವಿಭಾಗದಲ್ಲಿ ಶೇ.34.48 ಹಾಗೂ ಕಲಬುರಗಿ ವಿಭಾಗದಲ್ಲಿ ಅತಿ ಹೆಚ್ಚು ಶೇ.70.93 ರಷ್ಟು ಮಕ್ಕಳು ಅಂಗನವಾಡಿ ಕೇಂದ್ರದ ಮೇಲೆ ಅವಲಂಬಿತರಾಗಿದ್ದಾರೆ. ಪೂರ್ವ ಪ್ರಾಥಮಿಕ ತರಗತಿ ಪ್ರಾರಂಭದಿಂದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಅಂಗನವಾಡಿ ಮೇಲಿನ ಹೊರೆ ಸಹ ತಪ್ಪಲಿದೆ ಎಂದು ಅವರು ತಿಳಿಸಿದ್ದಾರೆ.

ಅತಿಥಿ ಶಿಕ್ಷಕರ ಹಾಗೂ ಆಯಾಗಳ ನೇಮಕಾತಿ: ರಾಜ್ಯ ಸರ್ಕಾರ ಕಲಬುರಗಿ ವಿಭಾಗದ 1,008 ಆಯ್ದ ಪ್ರಾಥಮಿಕ ಶಾಲೆಗಳಲ್ಲಿ ಎಲ್.ಕೆ.ಜಿ–ಯು.ಕೆ.ಜಿ. ತರಗತಿಗೆ ಅನುಮತಿ ನೀಡಿರುವ ಹಿನ್ನೆಲೆಯಲ್ಲಿ ಪೂರ್ವ ಪ್ರಾಥಮಿಕ ಹಂತಕ್ಕೆ ಶಾಲಾ ಹಂತದಲ್ಲಿಯೆ ನಿಯಮಾನುಸಾರ ಅತಿಥಿ ಶಿಕ್ಷಕರ ಮಕ್ಕಳ ಪಾಲನೆಗೆ ಆಯಾ ನೇಮಕ ಮಾಡಿಕೊಳ್ಳಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

### ಕೇಂದ್ರ ಅನುದಾನದ ನಿರೀಕ್ಷೆ

ಪೂರ್ವ ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಗುಣಾತ್ಮಕ ಶಿಕ್ಷಣ ಮತ್ತು ಕ್ರಿಯಾತ್ಮಕ ಚಟುವಟಿಕೆ ಸೇರಿದಂತೆ ಇನ್ನಿತರ ಮಾನದಂಡ ಅಧರಿಸಿ ಕೇಂದ್ರ ಸರ್ಕಾರವು ಅಂತಹ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಪ್ರೊಜೆಕ್ಟ್ ಅಪ್ರೂವಲ್ ಬೋರ್ಡ್‌ನಿದ ಅನುಮೋದನೆ ನೀಡಿ ಹೆಚ್ಚಿನ ಅನುದಾನ ನೀಡುತ್ತದೆ. ಆ ಮೂಲಕ ರಾಜ್ಯದ ಮಕ್ಕಳಿಗೆ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ದೊರೆಯಲು ಸಹಕಾರಿಯಾಗುವುದಲ್ಲದೆ ರಾಜ್ಯ ಸರ್ಕಾರದ ಜೊತೆ ಕೇಂದ್ರ ಸರ್ಕಾರ ಅನುದಾನ ಸಹ ಬರಲಿದೆ ಎಂದು ಡಾ.ಆಕಾಶ ಎಸ್. ತಿಳಿಸಿದ್ದಾರೆ.

# ಕೆರೆಯಂತಾದ ಕಾಲೇಜ್ ರಸ್ತೆ

## ಘಟನೆ ಮರುಕಳಿಸುತ್ತಿದ್ದರೂ ಕಣ್ತೆರೆಯದ ನಗರಸಭೆ ಅಧಿಕಾರಿಗಳ ವಿರುದ್ಧ ಜನಾಕ್ರೋಶ

**ಹಂಪಿ ಟೈಮ್ಸ್ ಹೊಸಪೇಟೆ**

ನಗರದಲ್ಲಿ ಬುಧವಾರ ಮಧ್ಯಾಹ್ನದಿಂದ ಗಂಟೆಗಳ ಕಾಲ ನಿರಂತರವಾಗಿ ಸುರಿದ ಮಳೆಗೆ ನಗರದ ಅನೇಕ ರಸ್ತೆಗಳು ಕೆರೆಯಂತಾಗಿದ್ದು, ಶಾಲಾ ವಿದ್ಯಾರ್ಥಿಗಳ ಪಠ್ಯ ಪುಸ್ತಕಗಳು ನೀರುಪಾಲಾಗಿದ್ದು, ರಸ್ತೆ ದಾಟಲು ಹರಸಾಹಸಪಟ್ಟರು. ವಾಹನ ಸವಾರರ ವಾಹನಗಳು ಸೈಲೆನ್ಸರ‌ನಲ್ಲಿ ನೀರು ಹೊಕ್ಕು ಇಂಜಿನ್ ಸ್ಥಗಿತಗೊಂಡು ಪರದಾಡಿದರು. ಕಾಲೇಜ್ ರಸ್ತೆಯ ಅಕ್ಕಪಕ್ಕದಲ್ಲಿ ಅವೈಜ್ಞಾನಿಕವಾಗಿ ತಲೆ ಎತ್ತಿರುವ ಕಟ್ಟಡಗಳಿಂದಾಗಿ ಮಳೆ ನೀರು ರಸ್ತೆಯಲ್ಲಿ ನಿಂತು ಕೆರೆಯಂತಾಗುತ್ತಿದೆ.




ಈಗಾಗಲೇ ಅನೇಕ ಬಾರಿ ಈ ಘಟನೆಗಳು ಮರುಕಳಿಸುತ್ತಿದ್ದರೂ ಸಂಬಂಧಿಸಿದ ಅಧಿಕಾರಿಗಳು ಸರಿಪಡಿಸದಿರುವುದಕ್ಕೆ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಭಾರಿ ಮಳೆಯಿಂದಾಗಿ ರಸ್ತೆಗಳು ಕಾಲುವೆಯಂತಾಗಿವೆ. ರಸ್ತೆ ಅಕ್ಕಪಕ್ಕದ ಚರಂಡಿಗಳು ತುಂಬಿ ರಸ್ತೆಗೆ ನೀರು ನುಗ್ಗಿದೆ. ಚರಂಡಿಗಳಲ್ಲಿನ ಹೂಳು, ಕಸ ನಿರಂತರ ತೆಗೆಯದಿರುವುದರಿಂದ ನೀರು ರಸ್ತೆಗೆ ನುಗ್ಗಿದ್ದು ಪಾದಚಾರಿಗಳಿಗೆ ರಸ್ತೆ ಯಾವುದೋ, ಚರಂಡಿ ಯಾವುದೋ ಎಂಬುದು ತಿಳಿಯದಾಗಿದೆ. ರಸ್ತೆಗಳಲ್ಲಿ ಎಲ್ಲೆಂದರಲ್ಲಿ ಗುಂಡಿಗಳಿರುವುದರಿಂದ ಮಳೆಗಾಲದಲ್ಲಿ ಅನಾಹುತಸಂಭವಿಸುವ ಮುನ್ನ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಬೇಕು. ನೀರು ನಿಲ್ಲುವ ತಗ್ಗು ರಸ್ತೆಗಳನ್ನು ಎತ್ತರಿಸಿ, ಸುಗಮ ಸಂಚಾರಕ್ಕೆ ಸಂಬಂಧಿಸಿದ ಅಧಿಕಾರಿಗಳು ಕ್ರಮವಹಿಸಲಿ ಎಂದು ವಾಹನ ಸವಾರರು, ವಿದ್ಯಾರ್ಥಿಗಳು ಒತ್ತಾಯಿಸಿದ್ದಾರೆ.







ಭಾರಿ ಮಳೆಯಿಂದಾಗಿ ಹೊಸಪೇಟೆ ತಾಲೂಕಿನ ಸೀತಾರಾಮ್ ತಾಂಡಾದಲ್ಲಿ ರೈತ ಭಜನಿ ಹನುಮಾನಾಯ್ಕ್‌ಗೆ ಸೇರಿದ ಎತ್ತು ವಿದ್ಯುತ್ ಸ್ಪರ್ಶಿಸಿ ಬುಧವಾರ ಸಾವಿಗೀಡಾಗಿದೆ.


## ವಿಜ್ಞಾನ

# ಗಾಳಿಗೆ ತೆರೆದಿಟ್ಟ ಬ್ರೆಡ್ ಏಕೆ ಗಟ್ಟಿಯಾಗುತ್ತದೆ?

**ಆರ್.ಬಿ.ಗುರುಬಸವರಾಜ**

ಬ್ರೆಡ್ ಒಂದು ಪ್ರಮುಖ ಆರೋಗ್ಯಕರ ಆಹಾರ ಪದಾರ್ಥವಾಗಿದೆ. ಮಕ್ಕಳಿಂದ ಮುದುಕರವರೆಗೂ ಇಷ್ಟವಾದ ಒಂದು ತಿನಿಸು ಆಗಿದೆ. ಅದರ ಮೃದುತನ ಎಲ್ಲರಿಗೂ ಇಷ್ಟ. ಬ್ರೆಡ್‌ನ್ನು ಗೋದಿ(ಮೈದಾ)ಹಿಟ್ಟು, ನೀರು, ಯೀಸ್ಟ್ ಮತ್ತು ಉಪ್ಪುಗಳ ಮಿಶ್ರಣದಿಂದ ತಯಾರಿಸಲಾಗುತ್ತದೆ. ಕೆಲವೊಮ್ಮೆ ಹಾಲು ಮತ್ತು ಮೊಟ್ಟೆಯನ್ನೂ ಸಹ ಬಳಸಲಾಗುತ್ತದೆ.

ಬ್ರೆಡ್‌ನಲ್ಲಿರುವ ಪಿಷ್ಟದ ಅಣುಗಳು ಎರಡು ರೀತಿಯ ಸರಪಳಿಗಳಿಂದ ಮಾಡಲ್ಪಟ್ಟಿವೆ. ಅಮೈಲೋಸ್ ಮತ್ತು ಅಮೈಲೋಪೆಕ್ಟಿನ್. ಅಮೈಲೋಸ್ ರೇಖಾತ್ಮಕ ಸರಪಳಿಯಾಗಿದೆ ಮತ್ತು ಅಮೈಲೋಪೆಕ್ಟಿನ್ ಕವಲೊಡೆದ ಸರಪಳಿಯಾಗಿದೆ. ಬ್ರೆಡ್ ಅನ್ನು ಬೇಯಿಸಿದಾಗ, ಪಿಷ್ಟದ ಅಣುಗಳು ಭಾಗಶಃ ತಂತು ರೂಪ ಪಡೆದುಕೊಳ್ಳುತ್ತವೆ. ಮತ್ತು ತಾಜಾ ಬ್ರೆಡ್‌ನ ಮೃದುವಾದ ವಿನ್ಯಾಸವನ್ನು ರಚಿಸುತ್ತವೆ.



ಬ್ರೆಡ್‌ನಲ್ಲಿನ ತಾಜಾತನ ಹಾಳಾಗದಿರಲು ಅದನ್ನು ಗಾಳಿಯಾಡದ ಕಂಟೇನರ್ ಅಥವಾ ಪಾಲಿಥೀನ್ ಚೀಲದಲ್ಲಿ ಸಂಗ್ರಹಿಸಿ ಇಡಲಾಗುತ್ತದೆ. ಆದರೆ ಬ್ರೆಡನ್ನು ಗಾಳಿಯಲ್ಲಿ ತೆರೆದಿಟ್ಟರೆ ಕೆಲವೇ ಸಮಯದ ನಂತರ ಅದು ತನ್ನ ಮೃದುತ್ವವನ್ನು ಕಳೆದುಕೊಂಡು ಗಟ್ಟಿಯಾಗುತ್ತದೆ. ಹಾಗಾದರೆ ಗಾಳಿಯಲ್ಲಿ ತೆರೆದಿಟ್ಟ ಬ್ರೆಡ್ ಏಕೆ ಗಟ್ಟಿಯಾಗುತ್ತದೆ ಎಂಬ ಪ್ರಶ್ನೆ ಬರುತ್ತದೆ.

ತೆರೆದ ಪ್ರದೇಶದಲ್ಲಿಟ್ಟ ಬ್ರೆಡ್ ಗಟ್ಟಿಯಾಗಲು 'ಸ್ಟಾಲಿಂಗ್' ಎಂಬ ಪ್ರಕ್ರಿಯೆ ಕಾರಣವಾಗಿದೆ. ಸ್ಟಾಲಿಂಗ್ ಒಂದು ನೈಸರ್ಗಿಕ ಪ್ರಕ್ರಿಯೆಯಾಗಿದ್ದು ಅದು ಬ್ರೆಡ್ ತೇವಾಂಶವನ್ನು ಕಳೆದುಕೊಂಡಾಗ ಮತ್ತು ಬ್ರೆಡ್‌ನಲ್ಲಿರುವ ಪಿಷ್ಟದ ಅಣುಗಳು ಸ್ಫಟಿಕೀಕರಣಗೊಳ್ಳಲು ಪ್ರಾರಂಭಿಸಿದಾಗ ಸಂಭವಿಸುತ್ತದೆ.

ಬ್ರೆಡ್ ಅನ್ನು ಬೇಯಿಸಿದಾಗ, ಒಲೆಯಲ್ಲಿನ ಶಾಖವು ಬ್ರೆಡ್‌ನಲ್ಲಿರುವ ಪಿಷ್ಟವನ್ನು ಎಳೆಗಳನ್ನಾಗಿ ಮಾಡಲು ಕಾರಣವಾಗುತ್ತದೆ, ಇದು ಬ್ರೆಡ್‌ಗೆ ಮೃದುವಾದ ವಿನ್ಯಾಸವನ್ನು ನೀಡುತ್ತದೆ. ಆದಾಗ್ಯೂ ಬ್ರೆಡ್ ತಣ್ಣಗಾಗುತ್ತಿದ್ದಂತೆ, ಬ್ರೆಡ್‌ನಲ್ಲಿನ ತೇವಾಂಶವು ಪಿಷ್ಟದ ಅಣುಗಳಿಂದ ನಷ್ಟವಾಗತೊಡಗುತ್ತದೆ. ತೇವಾಂಶದ ನಷ್ಟವು ಪಿಷ್ಟದ ಅಣುಗಳನ್ನು ಮರುಹರಳಾಗಿಸಲು ಕಾರಣವಾಗುತ್ತದೆ ಮತ್ತು ಪರಸ್ಪರ ಹೊಸ ಬಂಧಗಳನ್ನು ರೂಪಿಸುತ್ತವೆ. ಇದರಿಂದ ಬ್ರೆಡ್ ಗಟ್ಟಿಯಾಗುತ್ತದೆ.

ಸ್ಟಾಲಿಂಗ್ ಪ್ರಕ್ರಿಯೆಯನ್ನು ನಿಧಾನಗೊಳಿಸಲು ಮತ್ತು ಬ್ರೆಡ್ ಅನ್ನು ದೀರ್ಘಕಾಲದವರೆಗೆ ತಾಜಾವಾಗಿಡಲು, ಅದನ್ನು ಗಾಳಿಯಾಡದ ಧಾರಕಗಳಲ್ಲಿ ಅಥವಾ ಪ್ಲಾಸ್ಟಿಕ್ ಚೀಲಗಳಲ್ಲಿ ಸಂಗ್ರಹಿಸುವುದು ಉತ್ತಮ.

# ವಿಶೇಷ ಸಂಪನ್ಮೂಲ ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಶೈಕ್ಷಣಿಕ ಸಾಲಿಗೆ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿಯಲ್ಲಿ ಸಮನ್ವಯ ಶಿಕ್ಷಣ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಬ್ಲಾಕ್‌ಗಳಲ್ಲಿ ಖಾಲಿ ಇರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿಶೇಷ ಸಂಪನ್ಮೂಲ ಶಿಕ್ಷಕರ (ಬಿ.ಐ.ಇ.ಆರ್.ಟಿ) ಹುದ್ದೆಗಳಿಗೆ ಅರ್ಹ ಶಿಕ್ಷಕರನ್ನು ನೇಮಿಸಿಕೊಳ್ಳಲು ನೇರಗುತ್ತಿಗೆಯಡಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸಲು ಅರ್ಜಿ ಆಹ್ವಾನಿಸಲಾಗಿದೆ.

ಪೂರ್ವ ಪ್ರಾಥಮಿಕ ಹಾಗೂ 1 ರಿಂದ 5ನೇ ತರಗತಿ, 6 ರಿಂದ 8ನೇ ತರಗತಿ ಮತ್ತು 9 ರಿಂದ 12ನೇ ತರಗತಿಗೆ ಬೋಧಿಸಲು ವಿಶೇಷ ಶಿಕ್ಷಕರು ಅರ್ಜಿ ಸಲ್ಲಿಸಬಹುದು. ಅಭ್ಯರ್ಥಿಗಳು ಆರ್‌ಸಿಐನಲ್ಲಿ ನೋಂದಣಿ ಹೊಂದಿದ ಹಾಗೂ ಸಿ.ಆರ್.ಆರ್ ನಂಬರ್ ಮಾನ್ಯತೆ ಹೊಂದಿರುವ ಹಾಗೂ ಚಾಲ್ತಿಯಲ್ಲಿರುವ ಸಂಸ್ಥೆಗಳಿಂದ ನಿಗದಿತ ವಿದ್ಯಾರ್ಹತೆ ಹೊಂದಿರಬೇಕು. ಸೇವಾ ಜೇಷ್ಠತೆಯನ್ನು ಪರಿಗಣಿಸಲಾಗುವುದು. ಹುದ್ದೆಗಳು ತಾತ್ಕಾಲಿಕವಾಗಿದ್ದು, 2025ರ ಮಾ.31ರವರೆಗೆ ಅಥವಾ ಮುಂದಿನ ಆದೇಶದವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಇರುತ್ತದೆ. ನೇರ ಗುತ್ತಿಗೆಯಡಿ ತಾತ್ಕಾಲಿಕವಾಗಿ ಸೇವೆ ಪಡೆದ ವಿಶೇಷ ಶಿಕ್ಷಕರು ಬಿ.ಐ.ಇ.ಆರ್.ಟಿ ಹುದ್ದೆಗಳು ಸರ್ಕಾರಿ ಶಾಲಾ ವಿಶೇಷ ಶಿಕ್ಷಕರಿಂದ ಭರ್ತಿಯಾದಲ್ಲಿ ನೇರ ಗುತ್ತಿಗೆಯ ಬಿ.ಐ.ಇ.ಆರ್.ಟಿಗಳನ್ನುಕೂಡಲೇಸೇವೆಯಿಂದಬಿಡುಗಡೆಗೊಳಿಸಲಾಗುವುದು. ಆಸಕ್ತರು ಜೂನ್ 20ರೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಉಪ ನಿರ್ದೇಶಕರು ಮತ್ತು ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ, ಸಮಗ್ರ ಶಿಕ್ಷಣ ಕರ್ನಾಟಕ, ವಿಜಯನಗರ ಜಿಲ್ಲಾ ಕಚೇರಿ ಇವರಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಉಪ ನಿರ್ದೇಶಕರ ಕಾರ್ಯಾಲಯ ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ಸಮಗ್ರ ಶಿಕ್ಷಣ ಕರ್ನಾಟಕ ವಿಜಯನಗರ ಜಿಲ್ಲೆ ಕಚೇರಿಗೆ ಸಂಪರ್ಕಿಸಬಹುದಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

14 ಭಾಷೆ
ಈಗ ನಿಮ್ಮ ಮಾತೃ ಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA